(ಖಂಡ 23ರಿಂದ 50ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷಿಣಿಯವರು: "ಪ್ರಸ್ತಾಪ ಏನೆಂದರೆ, "ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು): ಮಾನ್ಯ ಸಭಾಧ್ಯಕ್ಷಿಣಿಯವರೆ, 1991ನೇ ಸಾಲಿನ ಕನ್ನಡ ವಿಶ್ವವಿದ್ಯಾನಿಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು: ಪ್ರಸ್ತಾಪ ಏನೆಂದರೆ, "1991ನೇ ಸಾಲಿನ ಕನ್ನಡ ವಿಶ್ವವಿದ್ಯಾನಿಲಯ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾಪವು ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಸರ್ವಾನುಮತದ ಮತ್ತು ಅವಿರೋಧದ ಅನುಮೋದನೆಯು ದೊರೆತಿದೆ.

ಶ್ರೀ ವಾಟಾಳ್ ನಾಗರಾಜ್ : ಕನ್ನಡಕ್ಕೆ ಜಯವಾಗಲಿ, ಕನ್ನಡಿಗರಿಗೆ ಜಯವಾಗಲಿ ....

(ಭಾವಿಯಲ್ಲಿ ಧರಣಿ ಕುಳಿತಿದ್ದ ಮಾನ್ಯ ಬಿ.ಜೆ.ಪಿ.ಯ ಸದಸ್ಯರುಗಳು "ರೈತರ ಸಾಲ ಮನ್ನಾ ಮಾಡದ ಸರಕಾರಕ್ಕೆ ಧಿಕ್ಕಾರ" ಎಂದು ಘೋಷಣೆ ಕೂಗುತ್ತಿದ್ದರು)

ಶಾಸನಾತ್ಮಕ ನಿರ್ಣಯ

ಉಪಾಧ್ಯಕ್ಷಿಣಿಯವರು: ಈಗ ಶಾಸನಾತ್ಮಕ ನಿರ್ಣಯಗಳು

ಶ್ರೀ ಎಂ. ವೀರಪ್ಪ ಮೊಯಿಲಿ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಶಾಸನಾತ್ಮಕ ನಿರ್ಣಯಗಳನ್ನು ಸಭೆಯ ಗಮನಕ್ಕೆ ತರುತ್ತೇನೆ.

"1948ನೇ ಇಸವಿಯ ವಿದ್ಯುಚ್ಛಕ್ತಿ (ಪೂರೈಕೆ) ಅಧಿನಿಯಮದ (1948ರ ಕೇಂದ್ರದ ಅಧಿನಿಯಮ 54) 65ನೇ ಕಲಮಿನ 1ನೇ ಉಪಕಲಮಿನ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಯಾವುದೇ ಸಮಯದಲ್ಲಿ ಪಡೆಯಬಹುದಾದ ಸಾಲದ ಮೊತ್ತವನ್ನು ರೂ. 10 ಕೋಟಿಗೂ ಹೆಚ್ಚಿನ ಗರಿಷ್ಠ ಮಿತಿಗೆ ನಿಗದಿಪಡಿಸಲು ಸದರಿ ಕಲಮಿನ 3ನೇ ಉಪಕಲಮಿನ ಮೇರೆಗೆ ರಾಜ್ಯ ವಿಧಾನಸಭೆಯ ಅನುಮೋದನೆ ಬೇಕಾಗಿರುತ್ತದೆ.

ಹಾಗೂ ಈ ಕಾರಣದಿಂದ ದಿನಾಂಕ 27ನೇ ಆಗಸ್ಟ್ 1974ರಂದು ಕರ್ನಾಟಕ ವಿಧಾನಸಭೆಯು ಒಂದು ನಿರ್ಣಯವನ್ನು ಅಂಗೀಕರಿಸುವ ಮೂಲಕ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಯಾವುದೇ ಸಮಯದಲ್ಲಿ ಪಡೆಯಬಹುದಾದ ಸಾಲದ ಗರಿಷ್ಠ ಮೊತ್ತವನ್ನು ರೂ.150 ಕೋಟಿ ಎಂದು ನಿಗದಿಪಡಿಸಿರುವ ಸರ್ಕಾರದ ಪ್ರಸ್ತಾವನೆಗೆ ಅನುಮತಿ ನೀಡಿರುತ್ತದೆ.

ಹಾಗೂ ಈ ಕಾರಣದಿಂದ ಸದರಿ ಅಧಿನಿಯಮದ 65ನೇ ಕಲಮಿನ 1ನೇ ಉಪಕಲಮಿನ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಯಾವುದೇ ಸಮಯದಲ್ಲಿ ಪಡೆಯಬಹುದಾದ ಸಾಲದ ಗರಿಷ್ಠ ಮೊತ್ತ ರೂ. 150 ಕೋಟಿ ಎಂದು 27ನೇ ಆಗಸ್ಟ್ 1974ರಿಂದ ಜಾರಿಗೆ ಬರುವಂತೆ ಸರ್ಕಾರ ನಿಗದಿ ಪಡಿಸಿರುವುದಕ್ಕೆ ಸಂಬಂಧಿಸಿದಂತೆ ಸದರಿ ಕಲಮಿನ 3ನೇ ಉಪಕಲಮನ್ನು ಅನುಸರಿಸಿ ಪಿ.ಡಬ್ಲ್ಯು.ಡಿ.84 ಇಇಬಿ 73ನೇ ಕ್ರಮಾಂಕದ ಆದೇಶವನ್ನು 10ನೇ ಸೆಪ್ಟೆಂಬರ್1974ರಂದು ಹೊರಡಿಸಲಾಗುತ್ತದೆ.

ಹಾಗೂ ಈ ಕಾರಣದಿಂದ ದಿನಾಂಕ 8ನೇ ಜೂನ್ 1984ರಂದು ಕರ್ನಾಟಕ ವಿಧಾನಸಭೆಯು ಒಂದು ನಿರ್ಣಯವನ್ನು ಅಂಗೀಕರಿಸುವ ಮೂಲಕ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಯಾವುದೇ ಸಮಯದಲ್ಲಿ ಪಡೆಯಬಹುದಾದ ಸಾಲದ ಗರಿಷ್ಠ ಮೊತ್ತವನ್ನು ರೂ.300 ಕೋಟಿ ಎಂದು ನಿಗದಿಪಡಿಸಿರುವ ಸರ್ಕಾರದ ಪ್ರಸ್ತಾವನೆಗೆ ಅನುಮತಿ ನೀಡಿರುತ್ತದೆ.

ಹಾಗೂ ಈ ಕಾರಣದಿಂದ ಸದರಿ ಅಧಿನಿಯಮದ 65ನೇ ಕಲಮಿನ 1ನೇ ಉಪಕಲಮಿನ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಯಾವುದೇ ಸಮಯದಲ್ಲಿ ಪಡೆಯಬಹುದಾದ ಸಾಲದ ಗರಿಷ್ಠ ಮೊತ್ತ ರೂ. 300 ಕೋಟಿ ಎಂದು 8ನೇ ಜೂನ್ 1984ರಿಂದ ಜಾರಿಗೆ ಬರುವಂತೆ ಸರ್ಕಾರ ನಿಗದಿಪಡಿಸಿರುವುದಕ್ಕೆ ಸಂಬಂಧಿಸಿದಂತೆ ಸದರಿ ಕಲಮಿನ 3ನೇ ಉಪಕಲಮನ್ನು ಅನುಸರಿಸಿ ಪಿ.ಡಬ್ಲ್ಯು.ಡಿ. 159 ಇಇಬಿ 84 ಕ್ರಮಾಂಕದ ಆದೇಶವನ್ನು 9ನೇ ಜೂನ್ 1984ರಂದು ಹೊರಡಿಸಲಾಗಿರುತ್ತದೆ.

ಹಾಗೂ ಈ ಕಾರಣದಿಂದ ಕರ್ನಾಟಕ ರಾಜ್ಯ ಸರ್ಕಾರ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಸದರಿ ಕಲಮಿನ 1ನೇ ಉಪಕಲಮಿನ ಮೇರೆಗೆ ಯಾವುದೇ ಸಮಯದಲ್ಲಿ ಪಡೆಯಬಹುದಾದ ಸಾಲದ ಗರಿಷ್ಠ ಮೊತ್ತವನ್ನು ರೂ. 600 ಕೋಟಿ ಎಂದು ನಿಗದಿಪಡಿಸಲು ಉದ್ದೇಶಿಸಿರುತ್ತದೆ.

ಆದುದರಿಂದ, ಈಗ, ಸದರಿ ಅಧಿನಿಯಮದ 65ನೇ ಕಲಮಿನ 1ನೇ ಉಪಕಲಮಿನ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಯಾವುದೇ ಸಮಯದಲ್ಲಿ ಪಡೆಯಬಹುದಾದ ಸಾಲದ ಗರಿಷ್ಠ ಮೊತ್ತದ ರೂ.600 ಕೋಟಿ ಎಂದು ನಿಗದಿಪಡಿಸುವ ರಾಜ್ಯ ಸರ್ಕಾರದ ಪ್ರಸ್ತಾವಕ್ಕೆ ಸದರಿ ಕಲಮಿನ 3ನೇ ಉಪಕಲಮಿನ ಮೇರೆಗೆ ಕರ್ನಾಟಕ ವಿಧಾನಸಭೆಯು ಈ ಮೂಲಕ ಅನುಮೋದನೆ ನೀಡುತ್ತದೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಿಣಿಯವರೇ, ಬಹಳ ಮಹತ್ವವಾದ ಒಂದು ಇಲಾಖೆಯ ಬಗ್ಗೆ ಒಂದು ನಿರ್ಣಯವನ್ನು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ವೀರಪ್ಪ ಮೊಯಿಲಿಯವರು ಮಂಡನೆ ಮಾಡಿದ್ದಾರೆ. ಇದೇನೂ ಅರ್ಜೆನ್ಸಿ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಈಗಾಗಲೇ ಸಮಯ ಆರು ಗಂಟೆ ಆಗಿದೆ. ಇನ್ನು ಬಹಳ ಜನ ಕೆ.ಇ.ಬಿ. ಬಗ್ಗೆ ಮಾತನಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಇದು ನಮಗೆ ಒಂದು ಒಳ್ಳೆಯ ಅವಕಾಶ ಕೆ.ಇ.ಬಿ. ಬಗ್ಗೆ ಮಾತನಾಡಲಿಕ್ಕೆ. ಇದನ್ನು ನೆಕ್ಸ್ಟ್ ಸೆಷನ್‌ನಲ್ಲಿ ತೆಗೆದುಕೊಳ್ಳೋಣ

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು): ತಮಗೂ ಕೂಡ ಗೊತ್ತಿದೆ. ಇದಕ್ಕೆ ವಿಶ್ವ ಬ್ಯಾಂಕಿನಿಂದ ನೆರವು ಬರಬೇಕಾಗುತ್ತದೆ. ಬೇರೆ ಬೇರೆ ಸಂಸ್ಥೆಗಳಿಂದ ಸಾಲವನ್ನು ತೆಗೆದುಕೊಳ್ಳಬೇಕಾಗುತ್ತದೆ. ಗರಿಷ್ಠ ಮಿತಿ ಇಲ್ಲದಿದ್ದರೆ ಏನಾಗುತ್ತದೆ, ಈ ಯೋಜನೆಗೆ ತೊಂದರೆಯಾಗುತ್ತದೆ. ತಾವು ಯಾವುದಾದರೂ ಒಂದು ನೀತಿಯ ಬಗ್ಗೆ ಚರ್ಚೆ ಮಾಡುವುದು ಇದ್ದರೆ, ಅಧಿವೇಶನದಲ್ಲಿ ಮಾಡೋಣ. ಈಗ ಲಿಮಿಟ್ ಇರತಕ್ಕಂಥ ಕಾರ್ಯವ್ಯಾಪ್ತಿ ಮತ್ತು ಕೆ.ಇ.ಬಿ. ಆಯವ್ಯಯ ಇದನ್ನೆಲ್ಲಾ ತಾವು ಹೋಲಿಸಿದರೆ ಈ ಸಾಲದ ಗರಿಷ್ಠ ಮಿತಿಯನ್ನು ಏರಿಸದಿದ್ದರೆ ಸಾಲವನ್ನು

ತೆಗೆದುಕೊಳ್ಳುವುದಕ್ಕೆ ಮತ್ತು ಬೇರೆ ಬೇರೆ ಸಂಸ್ಥೆಗಳಿಂದ ಬಾರೋಯಿಂಗ್‌ಗೆ ಕಷ್ಟವಾಗುತ್ತದೆ. ಈಗ ಬೇರೆ ಬೇರೆ ಹೆಚ್ಚು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಆದುದರಿಂದ ಇದು it is a matter of routine nature.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾನು ಒಪ್ಪಿಕೊಳ್ಳುತ್ತೇನೆ. ರೊಟೀನ್ ಮ್ಯಾಟರ್‌ನಲ್ಲಿ ಕೆ.ಇ.ಬಿ. ಸಾಲವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈಗ ಕೆ.ಇ.ಬಿ.ಗೆ ಆಲ್ಟರ್ನೇಟಿವ್ ಆಗಿ ಪವರ್ ಜನರೇಷನ್ ಇಲ್ಲ, ಮತ್ತು ಪವರ್ ಡಿಸ್ಟ್ರಿಬ್ಯೂಟ್ ಮಾಡುವುದಕ್ಕೆ ಬೇರೆ ಆಪರೇಟರ್ಸ್ ಯಾವುದೂ ಇಲ್ಲ. ಕೆ.ಇ.ಬಿ.ಗೆ ನಾವು ಮೊರೆ ಹೋಗಲೇಬೇಕು. ಅವರು ಅರ್ಜೆಂಟ್ ಆಗಿ ಸಾಲ ತೆಗೆದುಕೊಳ್ಳದೇ ಹೋದರೆ ಬಹುಶಃ ಸಂಬಳವನ್ನು ಕೊಡುವುದಕ್ಕೂ ದುಡ್ಡು ಇರುವುದಿಲ್ಲ ಎಂದು ಕಾಣುತ್ತದೆ. ಇದು ಬಹಳ ಒಂದು ಮಹತ್ವವಾದ ನಿರ್ಣಯ. ಈಗ ಅವರು 30-150 ಕೋಟಿ ರೂಪಾಯಿ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಪರ್ಮಿಷನನ್ನು ಅಸೆಂಬ್ಲಿ ಕೊಟ್ಟಾಗ 600 ಕೋಟಿ ರೂಪಾಯಿಗೂ ನಾವು ತಲುಪಿದ್ದೇವೆ. 800 ಕೋಟಿ ರೂಪಾಯಿಗಳಷ್ಟು ಸಾಲವನ್ನು ಬೇರೆ ಬೇರೆ ಸಂಸ್ಥೆಗಳಿಂದ ತೆಗೆದುಕೊಂಡಿದ್ದಾರೆ. ರಾಜ್ಯ ಸರ್ಕಾರ ಅದಕ್ಕೆ ಗ್ಯಾರಂಟಿಯಾಗಿ ನಿಂತಿದೆ. ಅಂಥ ಸಂದರ್ಭದಲ್ಲಿ ಒಬ್ಬ ಕೆ.ಇ.ಬಿ. ಅಧಿಕಾರಿ ಬಂದಿದ್ದಾರೆಯೇ? ಈ ನಿರ್ಣಯದ ಬಗ್ಗೆ ಚರ್ಚೆಯಾಗುವಾಗ ಯಾರಾದರೂ ಬಂದಿದ್ದಾರೆಯೇ? ಯಾರೂ ಕೂಡಾ ಬಂದಿಲ್ಲ. ಈ ಸದನದ ಚರ್ಚೆಗಳ ಬಗ್ಗೆ ಅವರಿಗೆ ಎಷ್ಟೊಂದು ಗೌರವ ಇದೆ. ಅಥವಾ ಈ ಸದನದಲ್ಲಿ ಮಸೂದೆಗಳ ಬಗ್ಗೆ ಏನಾದರೂ ಗೌರವ ಇದೆಯೇ ನೋಡಿ. ಇಲ್ಲಿ ಯಾರಾದರೂ ಬಂದಿದ್ದಾರೆಯೇ? ತಾವೇ ನೋಡಿ. ಇಲ್ಲಿ ಚರ್ಚೆ ಮಾಡಬೇಕು. ಇದು ಬಹಳ ಮುಖ್ಯವಾಗಿದೆ. ಏತಕ್ಕೆ ಹೇಳುತ್ತಿದ್ದೇನೆಂದರೆ ಈ ಸದನದಲ್ಲಿ Report of the Comptroller and Auditor General of India ರಿಪೋರ್ಟ್‌ನ್ನು ಮಂಡನೆ ಮಾಡಿದ್ದೀರಿ. ಅದರಲ್ಲಿ ಕೆ.ಇ.ಬಿ. ಬಗ್ಗೆ ಬಹಳ ಒಂದು ಆಶ್ಚರ್ಯಕರವಾಗಿರತಕ್ಕಂಥ ಒಂದು ವರದಿಯನ್ನು ಕೊಟ್ಟಿದ್ದಾರೆ. ಈ ರೆಸಲ್ಯೂಷನನ್ನು ನೋಡಿದಾಗ ಇಲ್ಲಿ ಒಂದು ರಿಪೋರ್ಟ್ ಬಂದಿದೆಯಲ್ಲಾ ಎಂದು ಹೇಳಿ ಸುಮ್ಮನೆ ಗಮನಿಸಿದೆ. ಪೂರ್ತಿಯಾಗಿ ಇದನ್ನು ಓದುವುದಕ್ಕೆ ಆಗಲಿಲ್ಲ. ಅವರು ಏನು ಹೇಳುತ್ತಾರೆ ಎಂದರೆ there have been several irregularities over the years ....

ನಿಮ್ಮ ಸರ್ಕಾರ ಇದ್ದಗ್ಯೂ ಇವರು ಇದನ್ನು ಮಾಡಿಕೊಂಡು ಹೋಗಿರುತ್ತಾರೆ ಕೆ.ಇ.ಬಿ.ಯವರು. ಈ ಸರ್ಕಾರ ಇದ್ದಾಗಲೂ ಸಹಾ ಇದೇ ವ್ಯವಹಾರಗಳನ್ನು ಇವರು ಮುಂದುವರಿಸಿಕೊಂಡು ಇವರು ಹೋಗಿದ್ದಾರೆ. ಆಡಳಿತದಲ್ಲಿ ಒಂದು ಬಿಗಿ ಬಾರದೇ ಇರುವುದರಿಂದಾಗಿ ಕೋಟ್ಯಾಂತರ ರೂಪಾಯಿಗಳ ದುರ್ವ್ಯವಹಾರ ಆಗಿದೆ. ಸಾಮಾನ್ಯ ಜನತೆಯ ಮೇಲೆ ಇದರಿಂದ ದೊಡ್ಡ ಆಘಾತವಾಗುತ್ತದೆ. ನಿಮಗೆ ಈ ಪುಸ್ತಕದಲ್ಲಿರತಕ್ಕಂಥ, ಪೇಜ್ 31ರಲ್ಲಿ ಅವರು ಏನು ಹೇಳಿದ್ದಾರೆ ಎಂದು ಹೇಳುತ್ತೇನೆ. ತಮಗೆ ಜಸ್ಟ್ ಒಂದು ಉದಾಹರಣೆಯನ್ನು ಕೊಡುತ್ತೇನೆ. ಸ್ಟೋರ್ಸ್‌ನಲ್ಲಿ 30.41 ಕೋಟಿ ರೂಪಾಯಿಗಳು, ಇವರು ಏನು ಹೇಳುತ್ತಾರೆ ಎಂದರೆ:

The Board however, continued to show the entire balance as closing stock, without ensuring their physical existence, though the requirement was pointed out in earlier years audit of accounts.

ಇಂತಹದ್ದನ್ನು ಹಲವಾರು ಕಡೆ ಹೇಳಿದ್ದಾರೆ. ಬಹಳ ಮುಖ್ಯವಾಗಿ ಮಾನ್ಯ ಮೊಯಿಲಿಯವರೆ, ಅವರು ಏನು ಹೇಳಿದ್ದಾರೆ ಎಂದರೆ,

"Balance with banks: Rs.12.17 crores; The bank accounts had not been properly maintained by the head Office depicting reliable figures of opening

balances and debts and credits for the year. The figures as per bank scrolls had been adopted and no effective bank reconciliation statement had been prepared in as much as the need therefor had been obviated".

ಇದು 12 ಕೋಟಿ ರೂಪಾಯಿಯದು ಆಯಿತು. ಆದಾದಮೇಲೆ ಬಹಳ ಮುಖ್ಯವಾದದ್ದು ಇನ್ನೊಂದನ್ನು ಹೇಳುತ್ತಾರೆ.

In respect of 10 divisions, the bank balances in operative accounts as per general ledger were not in agreement with those indicated as such in the Bank reconsiliation Statements to the extent of Rs.7.62 lakhs (7 divisions) and Rs.9.13 lakhs (3 divisions).

ಅಂದರೆ ಇವರ ಬ್ಯಾಂಕ್ ಅಕೌಂಟ್ಸ್ ಒಂದು. ಇವರ ಬ್ಯಾಂಕ್ ಆಫೀಸರ್‌ನಲ್ಲಿರತಕ್ಕ ಅಕೌಂಟ್ಸ್‌ಗೆ ಎಷ್ಟೊಂದು ವ್ಯತ್ಯಾಸ ಇದೆಯೆಂದರೆ, ಪ್ರತಿಯೊಂದು ಬ್ರಾಂಚ್ 7 ಡಿವಿಜನ್‌ಗಳಲ್ಲಿ 7 ಲಕ್ಷ ವ್ಯತ್ಯಾಸವಾಗಿರತಕ್ಕದ್ದು. ಇದನ್ನು ಹೇಳಿರತಕ್ಕದ್ದು ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿಯಲ್ಲಿ ನಾವು ಯಾರೂ ಸಹಿತ ಸಂಶಯವನ್ನು ಪಡದೆ ಇರತಕ್ಕ ವರದಿಯಲ್ಲಿ ಕೆ.ಇ.ಬಿ.ಯ ಬಗ್ಗೆ ಆಶ್ಚರ್ಯವಾಗಿರತಕ್ಕದ್ದು ನಮೂದಾಗಿದೆ. ಸರ್ಕಾರದವರು ನಾವಾಗಲಿ, ನೀವಾಗಲಿ ಇದನ್ನು ಬಹಳ ತೀವ್ರವಾಗಿ ತೆಗೆದುಕೊಳ್ಳಬೇಕಾಗಿದೆ.

ಈ ತರದ ಹತ್ತಾರು ಪುಟಗಳಲ್ಲಿ ಹೇಳಿದ್ದಾರೆ. ಈ ವರ್ಷದ ಎ.ಜಿ.ಯವರ ವರದಿಯಲ್ಲಿ ಹೇಳಿದ್ದಾರೆಂದು ಅಲ್ಲ. In respect of two divisions the bank balance has been overstated to the extent of Rs. 3.92 lakhs due to adoption of the balance in the co-operative accounts...ಇದರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕವರು ಯಾರು? ಇವರು ಮಾಡತಕ್ಕದ್ದು ಏನೆಂದರೆ ಮುಖ್ಯಮಂತ್ರಿಗಳ ಹತ್ತಿರ ಬರುತ್ತಾರೆ, ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಬರುತ್ತಾರೆ, ನಾವು ಸಂಬಳವನ್ನು ಹೆಚ್ಚು ಮಾಡಬೇಕೆಂದು ಸಾಮಾನ್ಯ ಜನರ ಮೇಲೆ ಟಾರಿಫ್ ಅನ್ನು ಹೆಚ್ಚು ಮಾಡುತ್ತಾರೆ. ಕೆ.ಇ.ಬಿ.ಯವರು ಟಾರಿಫ್‌ನ್ನು ಜಾಸ್ತಿ ಮಾಡಿದ್ದಾರೆಂದು ಮಂತ್ರಿ ಮಂಡಲದಲ್ಲಿ ಒಪ್ಪಿಗೆ ಕೊಡುತ್ತೀರಿ. ಕೆ.ಇ.ಬಿ.ಯಲ್ಲಿರತಕ್ಕ ಅಧಿಕಾರಿಗಳು ದೊಡ್ಡ ದೊಡ್ಡ ಶ್ರೀಮಂತರಾಗಿದ್ದಾರೆ. ಪರ್ಟಿಕ್ಯೂಲರ್ ಆಗಿ ಒಬ್ಬ ಕಮರ್ಶಿಯಲ್ ಏರಿಯಾದಲ್ಲಿರತಕ್ಕ ಒಬ್ಬ ಎಕ್ಸಿಕ್ಯೂಟಿವ್ ಇಂಜಿನಿಯರ್ ಒಂದು ತಿಂಗಳಿಗೆ ಕೊನೆಯ ಪಕ್ಷ 2ಲಕ್ಷ ರೂಪಾಯಿ ಹೊಡೆಯುತ್ತಾನೆ. ನಿಮಗೆ ಟ್ರಾನ್ಸ್‌ಮಿಷನ್ ಲಾಸ್ ಏನು ಹೇಳುತ್ತಿದ್ದಾರೆಂದರೆ ಇಡೀ ದೇಶದಲ್ಲಿ ಟ್ರಾನ್ಸ್‌ಮಿಷನ್ ಲಾಸ್ ಶರಾವತಿಯಲ್ಲೂ ಅಥವಾ ಶಿವನಸಮುದ್ರದಲ್ಲೂ ಉತ್ಪಾದನೆ ಮಾಡತಕ್ಕ ಕರೆಂಟ್ ಏನಿದೆ, ಅದನ್ನು ಐ.ಪಿ. ಸೆಟ್ ಇರತಕ್ಕವರಿಗೆ ತೆಗೆದುಕೊಂಡು ಹೋಗಬೇಕಾದರೆ ಮಧ್ಯದಲ್ಲಿ ಶೇಕಡ 25ರಷ್ಟು ಪವರ್ ಲಾಸ್ ಆಗುತ್ತಿದೆ. ಅದು ಏನಾಗುತ್ತಿದೆ? ಡಿಸ್ಟ್ರಿಬ್ಯೂಷನ್ ಸಿಸ್ಟಂ ಸರಿಯಿಲ್ಲವೆಂದು ನಾನು ಒಪ್ಪಿಕೊಳ್ಳಬಲ್ಲೆ. ಅದನ್ನು ಸರಿ ಮಾಡಲಿಕ್ಕೆ ಆಗುವುದಿಲ್ಲ, ನಾನು ಒಪ್ಪಿಕೊಳ್ಳತ್ತೇನೆ. ಸಿಸ್ಟಂನ್ನು ಇಂಪ್ರೂವ್ ಮಾಡಲಿಕ್ಕೆ ಟ್ರಾನ್ಸ್‌ಫಾರಂನ್ನು ಮಾಡಲಿಕ್ಕೆ ಹೈಹೊಲ್ಟೇಜ್ ಟ್ರಾನ್ಸ್‌ಫಾರಂ ಹಾಕಲಿಕ್ಕೆ ನಮ್ಮ ಹತ್ತಿರ ಹಣವಿಲ್ಲ, ನಾವು ವಿಶ್ವಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುತ್ತೇವೆಂದು ಹೇಳಿ ಇವತ್ತು ಸರ್ಕಾರವನ್ನು ತಪ್ಪುದಾರಿಗೆ ಎಳೆಯುವುದಕ್ಕೆ ಬೋರ್ಡ್‌ನವರು ಮುಂದೆ ಬಂದಿದ್ದಾರೆ. ಈ ಬೋರ್ಡ್‌ನಲ್ಲಿ ಯಾರಿದ್ದಾರೆ, ನಾವು ಯಾರಾದರೂ ಈ ಬೋರ್ಡ್‌ನಲ್ಲಿ ಇರುತ್ತೀವಾ? ಅಲ್ಲಿರತಕ್ಕ ಕೆಲವು ಅಧಿಕಾರಿಗಳು ಇದೇ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಅಲ್ಲಿ ಶಿಸ್ತು ಎನ್ನತಕ್ಕದ್ದು ಇಲ್ಲವೇ ಇಲ್ಲ. ಫೈನಾನ್ಸಿಯಲ್ ಇರೆಗ್ಯುಲಾರಿಟೀಸ್ ಏನು 10-20ಸಾವಿರ ಅಂದರೆ ತಾವು ಅರ್ಥಮಾಡಿಕೊಳ್ಳಬಹುದಾಗಿತ್ತು.

ಇವತ್ತು ಕೋಟ್ಯಾಂತರ ರೂಪಾಯಿ ಫೈನಾನ್ಷಿಯಲ್ ಇರೆಗ್ಯುಲಾರಿಟಿಸ್ ಇರತಕ್ಕಂಥ ಬೋರ್ಡ್ 800 ಕೋಟಿ ರೂಪಾಯಿ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಮಂಜೂರಾತಿ ಕೊಡಬೇಕೆಂದು ಹೇಳಿರುವುದು ನಿಮ್ಮ ತಿಳುವಳಿಕೆಗೆ ಬಂದಿಲ್ಲವೆಂದು ನಾನು ಅರ್ಥಮಾಡಿಕೊಂಡಿದ್ದೇನೆ.

ನೀವು ಇದಕ್ಕೆ ಏನು ಉತ್ತರ ಕೊಡುತ್ತೀರಿ? ಈ ಕೆ.ಇ.ಬಿ. ಬಗ್ಗೆ ಪ್ರತಿಯೊಬ್ಬರು ಸಹ ಶಾಪ ಹಾಕುತ್ತಿದ್ದಾರೆ, ಇದನ್ನು ಸರಿಮಾಡುವುದಕ್ಕೆ ಒಂದು ಪ್ರಾಮಾಣಿಕ ಪ್ರಯತ್ನ ನಮ್ಮ ಕಾಲದಲ್ಲಿಯೂ ಕೂಡ ನಡೆಯಲಿಲ್ಲ, ನಿಮ್ಮ ಕಾಲದಲ್ಲಿ ನಡೆಯತಕ್ಕಂಥ ಒಂದು ಸೂಚನೆಯೂ ಕಂಡುಬರುತ್ತಿಲ್ಲ, ಇವತ್ತು ಕೂಡಾ ಅದೇ ಅನುಭವವಾಗಿದೆ. ಏಕೆಂದರೆ ಪವರ್ ಇಲ್ಲದಿದ್ದಾಗ ನಾವು ಏನು ಮಾಡುವುದಕ್ಕೆ ಆಗುವುದಿಲ್ಲ ತಮಗೆ ನನ್ನ ಕ್ಷೇತ್ರದ ಒಂದು ಉದಾಹರಣೆಯನ್ನು ಹೇಳುತ್ತೇನೆ. ರೈತರೆಲ್ಲ ನಮಗೆ 8 ಗಂಟೆಗಳ ಕಾಲ ಅವಿರತವಾಗಿ ಕರೆಂಟ್ ಕೊಡಿ ಎಂದು ಕೇಳುತ್ತಿದ್ದೇವೆ, ನಿಮಗೂ ಕೂಡ ರೈತರ ಸಮಸ್ಯೆ ಏನು ಎಂದು ಗೊತ್ತಿದೆ. ನಮಗೆ ಕರೆಂಟ್ ಸಿಕ್ಕುವುದಿಲ್ಲ. ಆದರೆ ನಮ್ಮ ಕ್ಷೇತ್ರಕ್ಕೆ ಎಂಟ್ರಿ ಆಗುವಾಗ ಟೆಕ್ಸ್‌ಟೈಲ್ ಮಿಲ್‌ಗಳು ಬರುತ್ತವೆ. ಅಲ್ಲಿ ಹೈ-ಪವರ್ ಟೆನ್‌ಷನ್ ಕನ್‌ಸಂಷನ್ ಎಷ್ಟು ಎಂದರೆ ನಮ್ಮ ತಾಲ್ಲೂಕಿನಲ್ಲಿರತಕ್ಕ ರೈತರ ಐ.ಪಿ. ಸೆಟ್‌ಗಳು ಮತ್ತು ಸ್ಟ್ರೀಟ್ ಲೈಟ್‌ಗಳು, ಮಿನಿ ವಾಟರ್ ಸಪ್ಲೆ ಇದಕ್ಕೆಲ್ಲಾ ನಾವೇನು ಕರೆಂಟ್ ಉಪಯೋಗಿಸುತ್ತೇವೆ ಅದರ ಎರಡು ಪಟ್ಟು ಕರೆಂಟನ್ನು ಅವರು ಒಬ್ಬರೇ ಉಪಯೋಗಿಸಿಕೊಳ್ಳುತ್ತಾರೆ. ಅವರು ಉಪಯೋಗಿಸಿಕೊಳ್ಳುವುದರಲ್ಲಿ ನಮ್ಮದೇನು ತಕರಾರು ಇಲ್ಲ, ಏಕೆಂದರೆ ಅವರು ದುಡ್ಡನ್ನು ಕಟ್ಟಿಕೊಳ್ಳುತ್ತಾರೆ, ಆದರೆ ಅವರಿಗೆ ಯಾವುದೇ ರೀತಿ ಪವರ್ ಶೆಡ್‌ಡೌನ್ ಆಗುವುದಿಲ್ಲ. ಇದನ್ನು ನಾವು ನೋಡುತ್ತಲೇ ಇರುತ್ತೇವೆ, ಆ ಮಿಲ್ಲುಗಳು ಕಂಟಿನ್ಯುಯಸ್ ಆಗಿ ನಡೆಯುತ್ತಲೇ ಇರುತ್ತವೆ. ಇದಕ್ಕೆ ಕಾರಣ ಏನು ಎಂಬುದನ್ನು ತಾವು ದಯವಿಟ್ಟು ಅರ್ಥಮಾಡಿಕೊಳ್ಳಬೇಕು? ತಾವು ತಪಾಸಣೆ ಮಾಡಬೇಕೆಂದಿದ್ದರೆ, ಟ್ರಾನ್ಸ್‌ಮಿಷನ್ ಲಾಸಸ್ ಬಗ್ಗೆ, ಪವರ್ ತೆಫ್ಟ್ ಬಗ್ಗೆ ತ್ರೀಸ್ಟಾರ್ ಹೋಟೆಲ್ಲುಗಳು, ಫೈವ್ ಸ್ಟಾರ್ ಹೋಟೆಲ್ಲುಗಳಿಗೆ ತಾವು ಹೋಗಿ ನೋಡಬಹುದು. ಫೈವ್ ಸ್ಟಾರ್ ಹೋಟೆಲ್‌ಗಳು ಮತ್ತು ಪ್ರೈವೇಟ್ ಹೋಟೆಲ್‌ಗಳಲ್ಲಿ ಎರಡೆರಡು ಲೈನುಗಳನ್ನು ಇಟ್ಟುಕೊಂಡಿರುತ್ತಾರೆ, ಎರಡೆರಡು ಮೀಟರ್‌ಗಳನ್ನು ಇಟ್ಟುಕೊಂಡಿರುತ್ತಾರೆ ಇದು ಒಂದು ತರಹಃ ರಾಮನ ಲೆಕ್ಕ, ಕೃಷ್ಣನ ಲೆಕ್ಕ ಎಂದು ಹೇಳಬಹುದು. ಅಲ್ಲಿರತಕ್ಕಂತಹ ಒಬ್ಬ ಸಹಾಯಕ ಇಂಜಿನಿಯರ್‌ಗೆ ವರ್ಗಾವಣೆ ಮಾಡಬೇಕೆಂದು ಹೇಳಿದರೂ ಸುಮಾರು 15-25 ಜನರನ್ನು ತಮ್ಮ ಕೈಯಲ್ಲಿ ಹಿಡಿದಿಟ್ಟುಕೊಂಡಿರುತ್ತಾರೆ. ಅವರು ನಿಮ್ಮನ್ನು ಅಲ್ಲಾಡಿಸಿಬಿಡುತ್ತೇವೆ, ನಿಮ್ಮನ್ನು ಸೋಲಿಸಿಬಿಡುತ್ತೇನೆ ಎನ್ನತಕ್ಕ ಒಂದು ಸೈಕಲಾಜಿಕಲ್ ಫಿಯರ್ ಕ್ರಿಯೇಟ್ ಮಾಡುತ್ತಾರೆ. ಅವರು ಅಷ್ಟೊಂದು ಪವರ್ ಫುಲ್ ಆಗಿದ್ದಾರೆ, ಅವರನ್ನು ಯಾರಿಗೂ ಸಹಿತ ಅಲ್ಲಾಡಿಸಲಿಕ್ಕೆ ಆಗುವುದಿಲ್ಲ. ಇವತ್ತು ನನಗೆ ಅನ್ನಿಸಿದ ಪ್ರಕಾರ ಕೆ.ಇ.ಬಿ. ಟ್ಯಾರಿಫ್‌ನಿಂದ ಎಷ್ಟು ಹಣ ಕೆ.ಇ.ಬಿ.ಗೆ ಬರುತ್ತದೆ. ಅದರ ಎರಡರಷ್ಟು ಹಣ ಪೋಲು ಆಗುತ್ತಿದೆ. ಖಾಸಗಿಯವರ ಕಡೆ ಹೆಚ್ಚು ಪವರ್ ಹೋಗುತ್ತಿದೆ, ಇದಕ್ಕೆ ಕೊನೆ ಆಗಲೇಬೇಕಾಗುತ್ತದೆ. ಆದುದರಿಂದ ನಾನು ಈ ಸಂದರ್ಭದಲ್ಲಿ ತಮ್ಮಲ್ಲಿ ಕೇಳುವಂತಹದ್ದು ಒಂದೇ ವಿಚಾರ, ದಯವಿಟ್ಟು ಇದರ ಬಗ್ಗೆ ತಾವು ಒಂದು ಶ್ವೇತ ಪತ್ರವನ್ನು ಪ್ರಕಟಣೆ ಮಾಡಿ. ನೀವು ಏತಕ್ಕೆ ಮಾಡಲಿಲ್ಲ ಎಂದು ನಮ್ಮನ್ನು ತಾವು ಕೇಳಬಹುದು. ನಮಗೆ ವಿಧಿಯಿಲ್ಲ, ನಾವು ಹೇಳಬೇಕಾಗಿದೆ. ಮುನ್ನೂರು ಭಾಗ್ಯಜ್ಯೋತಿ ಎಕ್ಸ್‌ಟ್ರಾ ಕೊಡಿ, ಐದು ಹಳ್ಳಿಗಳಿಗೆ ಕರೆಂಟ್ ಹಾಕಿಬಿಡಿ, ನಿಮ್ಮ ಕೈ ಮುಗಿಯುತ್ತೇನೆ ಎಂದು ಕೇಳತಕ್ಕಂತಹ ಪರಿಸ್ಥಿತಿ ಬಂದಿದೆ. ಇತ್ತೀಚಿನ ದಿನಗಳಲ್ಲಿ ಏನು ಆಗಿದೆ ಎಂದರೆ, ದಾವಣಗೆರೆಯಲ್ಲಿ, ಚಿತ್ರದುರ್ಗದಲ್ಲಿ ಈ ಕೆ.ಇ.ಬಿ.ಯವರು ಹೇಗೆ ಕೆಲಸ ಮಾಡುತ್ತಾರೆಂದು ನನಗೆ ಗೊತ್ತಿಲ್ಲ, ಅಧ್ಯಕ್ಷರೆ ನಿಮ್ಮಲ್ಲಿಯೂ ಹಾಗೆಯೇ ಇದೆಯೋ? ಅಥವಾ ಉತ್ತಮ

ಪರಿಸ್ಥಿತಿಯಾಗಿದೆಯೋ ನನಗೆ ಗೊತ್ತಿಲ್ಲ. ಒಂದು ಕಂಬ ಹಾಕಬೇಕೆಂದರೆ 500 ರೂ. ಆಗುತ್ತದೆಂದು ಹೇಳುತ್ತಾರೆ.

ಉಪಾಧ್ಯಕ್ಷರು : ಆ ತರಹ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನೀವು ಹೇಳುವುದಕ್ಕೆ ಬರುವುದಿಲ್ಲ ಬಿಡಿ, 500 ರೂ. ಹಾಕಿದರೆ ಒಂದು ಕಂಬ ತಂದು ಕೊಡುತ್ತಾರೆ, ಮಾನ್ಯ ಮೊಯಿಲಿಯವರೇ ಅವರು ಏನು ಹೇಳುತ್ತಾರೆಂದು ಬೋಲ್ಟು, ನೆಟ್ಟು ತರುವುದಕ್ಕೆ ಆಗುವುದಿಲ್ಲ ನಮಗೆ ಹೆಡ್ ಆಫೀಸ್‌ನಿಂದ ಬಂದಿಲ್ಲ ಅವು ಕೃಷ್ಣಪ್ಪನ ಅಂಗಡಿಯಲ್ಲಿ ಸಿಕ್ಕುತ್ತವೆ, ಕೃಷ್ಣಪ್ಪನ ಅಂಗಡಿಯಲ್ಲಿ ಹೋಗಿ ತೆಗೆದುಕೊಂಡು ಬನ್ನಿ ಎಂದು ಹೇಳಿಕಳುಹಿಸುತ್ತಾರೆ. ಕೃಷ್ಣಪ್ಪನ ಅಂಗಡಿಗೂ ಇವರಿಗೂ ಎಲ್ಲಾ ವ್ಯವಹಾರಗಳೂ ಆಗಿರುತ್ತದೆ. ಆದುದರಿಂದ ಅಲ್ಲಿ ಎಷ್ಟು ಬೇಕಾದರೂ ಬೋಲ್ಟು, ನೆಟ್ಟುಗಳು ಸಿಗುತ್ತವೆ, ಏಕೆಂದರೆ ಇವರು ಮೊದಲೇ ವ್ಯವಹಾರವನ್ನು ಮಾಡಿಕೊಂಡಿರುತ್ತಾರೆ. ಒಂದೊಂದು ಕಂಬಕ್ಕೆ ಇಷ್ಟು ಎಂದು ನಿಗದಿ ಮಾಡಿದ್ದಾರೆ. ಈಗ ಏನಾಗಿದೆ ಎಂದರೆ ನಮ್ಮ ಗಮನವೆಲ್ಲಾ ಬೇರೆ ಕಡೆಗೆ ಹೋಗಿದೆ. ಜಿಲ್ಲಾಪರಿಷತ್ತಿನಿಂದ, ಅಧಿಕಾರವನ್ನು ಕಿತ್ತುಕೊಳ್ಳುವುದು, ಜಿಲ್ಲಾ ಪರಿಷತ್ತನ್ನು ಟೀಕೆಮಾಡತಕ್ಕಂತದ್ದು, ಮಂಡಲ ಪ್ರಧಾನರಿಗೆ ಟೀಕೆ ಮಾಡತಕ್ಕಂತದ್ದು, ಎಲ್ಲಾ ಅಧಿಕಾರಗಳನ್ನು ಕೊಟ್ಟುಬಿಟ್ಟಿದ್ದೇವೆ ಎಂದು ಹೇಳತಕ್ಕದ್ದು ಆಗುತ್ತಿದೆ. ಅವರು ಲೈಟ್ ಹಾಕಿಸಲಿಲ್ಲ ಎಂದು ಹೇಳುತ್ತಾರೆ, ಅಲ್ಲಿ ಲೈಟ್ ಹಾಕಿಸಿದರೆ, ಅವುಗಳು ಉರಿಯುವುದೇ ಇಲ್ಲ, ಇದಕ್ಕೆ ಕಾರಣ ಏನು? ಬರಗಾಲದಲ್ಲಿ ವಿಶೇಷವಾಗಿ ಕುಡಿಯುವ ನೀರಿಗೆ ಎಷ್ಟೊಂದು ತೊಂದರೆ ಇದೆ ಅಷ್ಟೇ ತೊಂದರೆ ವಿದ್ಯುತ್ತಿನ ಸರಬರಾಜಿನಲ್ಲೂ ಇದೆ. ಇದರ ಬಗ್ಗೆ ನೀವು ಬಲಿಷ್ಟವಾದ ರಾಜಕೀಯ ನಿರ್ಧಾರವನ್ನು ತೆಗೆದುಕೊಳ್ಳದೇ ಇಲ್ಲಿ ನಡೆಯುತ್ತಿರತಕ್ಕಂತಹ ಭ್ರಷ್ಟಾಚಾರವನ್ನು ತೆಗೆದುಹಾಕಲಿಕ್ಕೆ ಪ್ರಯತ್ನ ಮಾಡದೇ ಹೋದರೆ ಇದು ಅವಿರತವಾಗಿ ಮುಂದುವರೆದುಕೊಂಡು ಹೋಗುತ್ತಿರುತ್ತದೆ. ಇವರು ನಮ್ಮ ತಲೆಯ ಮೇಲೆ ಭಾರವನ್ನು ಹಾಕಿಕೊಂಡು ಹೋಗುತ್ತಾರೆ, ಆದ್ದರಿಂದ ಈ ನಿರ್ಣಯವನ್ನು ನಾನು ವಿರೋಧ ಮಾಡುತ್ತಿದ್ದೇವೆ. ಇದನ್ನು ನಾವು ವಿರೋಧ ಮಾಡುವುದಕ್ಕೆ ಮುಖ್ಯ ಕಾರಣವೇನೆಂದರೆ, ಈ ಒಂದು ಸಾಲದ ನೆಪದಲ್ಲಿ ಇನ್ನಷ್ಟು ಹಣವನ್ನು ಮತ್ತು ಕಮೀಷನ್ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಹೇಳಬೇಕೆಂದರೆ ತೀರಾ ಕೆಳಮಟ್ಟಕ್ಕೆ ಹೋಗಿದೆ. ಇದನ್ನು ಸರಿಪಡಿಸಬೇಕಾದರೆ ಒಂದು ದೃಢ ನಿರ್ಧಾರವನ್ನು ನೀವು ತೆಗೆದುಕೊಳ್ಳಬೇಕಾಗುತ್ತದೆ. ಒಂದು ರಾಜಕೀಯ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ಸರಿಪಡಿಸಿ ರಾಜ್ಯದ ಜನರಿಗೆ ವಿದ್ಯುಚ್ಛಕ್ತಿಯನ್ನು ಸರಿಯಾದ ರೀತಿಯಲ್ಲಿ ಕೊಡಬೇಕಾಗುತ್ತದೆ, ಇದಕ್ಕೋಸ್ಕರ ನಾವು ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ತಾವು ಹೇಳಬೇಕು. ಅವರು ಎಷ್ಟೇ ದೊಡ್ಡವರಿರಲಿ, ಅವರಿಗೆ ಎಷ್ಟೇ ದೊಡ್ಡ ಬೆಂಬಲ ಇರಲಿ, ಅವರನ್ನು ತಡೆಗಟ್ಟಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದರೆ ಮಾತ್ರ ಇದನ್ನು ಮಾಡಲಿಕ್ಕೆ ಸಾಧ್ಯವೇ ಹೊರತು ಇಲ್ಲದಿದ್ದರೆ ಸಾಧ್ಯವಿಲ್ಲ. ಕೆ.ಇ.ಬಿ.ಯಲ್ಲಿ ಅಧಿಕಾರಿಗಳ ವರ್ಗಾವಣೆ ಯಾವ

ರೀತಿಯಾಗುತ್ತಿದೆ ಎಂದರೆ, ಅದು ಮಂತ್ರಿಗಳು ಹೇಳಿದಂತೆ ಆಗುವುದಿಲ್ಲ, ಶಾಸಕರು ಹೇಳಿದಂತೆ ಆಗುವುದಿಲ್ಲ, ಆ ಜಿಲ್ಲೆಯಲ್ಲಿರತಕ್ಕ ವಿದ್ಯುಚ್ಛಕ್ತಿಯನ್ನು ದೊಡ್ಡ ಪ್ರಮಾಣದಲ್ಲಿ ಪಡೆಯತಕ್ಕ ಖಾಸಗೀ ಕೈಗಾರಿಕೋದ್ಯಮಿಗಳು ಯಾರಿದ್ದಾರೆ ಅವರು ಹೇಳಿದಂತೆ ಆಗುತ್ತಿದೆ. ಏತಕ್ಕೆ ಹೀಗಾಗುತ್ತಿದೆ? ಇವರಿಬ್ಬರಿಗೂ ಇರತಕ್ಕ ಲಿಂಕ್ ಏನು? ಇದನ್ನು ನಾವು ಮೊದಲು ಅರ್ಥಮಾಡಿಕೊಳ್ಳಬೇಕಾಗಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಮ್ಮ ಕಡೆ ಈ ರೀತಿ ಆಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದು ಏತಿ ಎಂದರೆ ಪ್ರೇತಿ ಎನ್ನುತ್ತಿತ್ತಂತೆ. ಇದು ಹೊರಗೆ ಹೋಗುವುದು, ಏನೋ ಕೆಲಸ ಮಾಡುವುದು, ತಿರುಗಿ ಬರುವುದು, ಹೊರಗೆ ಹೋಯ್ತಲ್ಲಾ ಎಂದರೆ ಮತ್ತೆ ಒಳಗೇ ಬಂತಲ್ಲಾ....

ಶ್ರೀ ಎಲ್.ಆರ್. ಶಿವರಾಮೇಗೌಡ : ನೀವು ಹಿರಿಯ ಸದಸ್ಯರು, ನಿಮ್ಮ ಬಾಯಲ್ಲಿ ಈ ಮಾತು ಬರಬಾರದಿತ್ತು. ನಾನು ನಿಮ್ಮಿಂದ ಈ ಮಾತನ್ನು ನಿರೀಕ್ಷಿಸಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಏನೂ ಮಾತನಾಡಲಿಲ್ಲವಲ್ಲ. ಮಾನ್ಯ ಶಿವರಾಮೇಗೌಡರು ನನ್ನ ಆತ್ಮೀಯ ಸ್ನೇಹಿತರು. ಏತಕ್ಕೆ ಹೀಗೆ ಆದರೋ ಎಂದು ನನ್ನ ವ್ಯಥೆ ಅಷ್ಟೆ.

ಶ್ರೀ ಡಿ.ಬಿ. ಚಂದ್ರೇಗೌಡ : ನೀವೂ ಏತಿ ಎಂದರೆ ಪ್ರೇತಿಯೆ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಿಣಿಯವರೆ, ಕೈಗಾರಿಕೆಯನ್ನು ಪ್ರಾರಂಭಮಾಡಿ ಒಂದು ಸಾವಿರ ಕಾರ್ಮಿಕರು ಇರತಕ್ಕ ಕೈಗಾರಿಕೆಗೆ ವಿದ್ಯುಚ್ಛಕ್ತಿಯನ್ನು ಕೊಡಲಿ ನಾನು ಅದನ್ನು ಬೇಡ ಎಂದು ಹೇಳುವುದಿಲ್ಲ. ಆದರೆ 15-20 ಜನ ಕೆಲಸಮಾಡತಕ್ಕ ಹೈಟೆನ್‌ಷನ್, ಹೈವೋಲ್ಟೇಜ್, ಹೈಪವರ್ ಇರುವ ಕಡೆ ಕೇವಲ 15 ದಿವಸಗಳಲ್ಲಿ ಪವರ್ ಸಿಕ್ಕುತ್ತದೆ. ಅಷ್ಟೇ ಅಲ್ಲ, ಬೆಂಗಳೂರಿನಲ್ಲಿ ಹೊಸದಾಗಿ ಬಡಾವಣೆಗಳಲ್ಲಿ ಮನೆಗಳನ್ನು ಕಟ್ಟಿಕೊಂಡವರಿಗೆ ಎ.ಇ.ಹೆಚ್.ನವರಿಗೆ ವಿದ್ಯುಚ್ಛಕ್ತಿಯನ್ನು ಕೊಡಿ ಎಂದರೆ ಅವರಿಗೆ ಮಾತ್ರ ವಿದ್ಯುಚ್ಛಕ್ತಿಯನ್ನು ಕೊಡುವುದಿಲ್ಲ ಎಂದು ಕೆ.ಇ.ಬಿ.ನವರು ಬ್ಯಾನ್ ಮಾಡಿದ್ದಾರೆ. ನಾವು ಅವರಿಗೆ ಹೊಸದಾಗಿ ಕನೆಕ್ಷನ್ಸ್ ಕೊಡುವುದಿಲ್ಲ ಎಂದು ಹೇಳುತ್ತಾರೆ. ಏಕೆಂದರೆ ಇವರು ಕೊಡತಕ್ಕ ಕಾಸು ಬಹಳ ಕಡಿಮೆ, 2 ಸಾವಿರವೋ, 3 ಸಾವಿರವೋ ಕೊಡುತ್ತಾರೆ. ಆದರೆ ಹೈ ಟೆನ್‌ಷನ್ ಬೇಕಾದ ಖಾಸಗೀ ಕೈಗಾರಿಕೋದ್ಯಮಿಗಳು ಯಾರಿದ್ದಾರೆ ಇವರು ಕೆ.ಇ.ಬಿ.ನವರಿಗೆ ಎಷ್ಟು ಬೇಕಾದರೂ ಹಣವನ್ನು ಕೊಡುತ್ತಾರೆ. ಇದರಿಂದಾಗಿ ಇವರು ದೊಡ್ಡ ದೊಡ್ಡ ಶ್ರೀಮಂತರಾಗಿ ನಮ್ಮ ರಾಜ್ಯದ ಜನರಮೇಲೆ ಒಂದು ದೊಡ್ಡ ಭಾರವಾಗಿದ್ದಾರೆ.

ಇನ್ನೊಂದು ವಿಚಾರವನ್ನು ಹೇಳುವುದಾದರೆ, ಇವತ್ತು ಬಹಳ ಜನರು ಕೆ.ಎಸ್.ಆರ್.ಟಿ.ಸಿ.ಯನ್ನು ಅದರ ವ್ಯವಹಾರಗಳ ಬಗ್ಗೆ ಟೀಕೆ ಮಾಡುತ್ತಾರೆ. ತಮಗೆ ಹೇಳುತ್ತೇನೆ, ಕೆ.ಎಸ್.ಆರ್.ಟಿ.ಸಿ.ಯ ವ್ಯವಹಾರವೆಲ್ಲಾ ಒಟ್ಟು ಸೇರಿಸಿದರೂ 300 ಕೋಟಿ ಅಥವಾ 400 ಕೋಟಿ ಆಗುವುದಿಲ್ಲ. ಆದರೆ ಕೆ.ಇ.ಬಿ.ಯಲ್ಲಿ ಪ್ರತಿವರ್ಷ ಸುಮಾರು 300 ಕೋಟಿ ಅಥವಾ 400 ಕೋಟಿ ರೂ.ಗಳಿಗಿಂತ ಹೆಚ್ಚು ಸೋರಿಹೋಗುತ್ತಿದೆ. ಇದನ್ನು ಯಾವರೀತಿ ಸರಿಪಡಿಸಬೇಕು? ಇದನ್ನು ಸರಿಪಡಿಸಬೇಕಾದರೆ ಮೊದಲು ಆಡಳಿತದಲ್ಲಿ ಎಲ್ಲಿ ತಪ್ಪಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಭ್ರಷ್ಟಾಚಾರ ಯಾವ ಹಂತದಲ್ಲಿದೆ? ಯಾರು ಯಾರು ಇದರಲ್ಲಿ ಶಾಮೀಲಾಗಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕಾದರೆ ಇದರ ಬಗ್ಗೆ ತಾವು ಮೊದಲನೆಯದಾಗಿ ಒಂದು ಶ್ವೇತ ಪತ್ರವನ್ನು ಹೊರಡಿಸಬೇಕು. ಎರಡನೆಯದಾಗಿ, ಇವರಿಗೆ ಅಕೌಂಟಬಿಲಿಟಿ ಇಲ್ಲ. ಆದುದರಿಂದ ಮೊದಲು ಇವರಿಗೆ ಅಕೌಂಟಬಿಲಿಟಿಯನ್ನು ಹಚ್ಚಬೇಕು. ಒಬ್ಬ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಅಥವಾ ಒಬ್ಬ ಎಕ್ಸಿಕ್ಯುಟಿವ್ ಇಂಜಿನಿಯರ್ ಅಥವಾ ಸೂಪರಿಂಟೆಂಡಿಂಗ್ ಇಂಜನಿಯರ್ ಯಾರಿದ್ದಾರೆ ಇವರು ಕೆ.ಪಿ.ಸಿ.ಯವರಿಂದ ಏನು ಪವರನ್ನು ತೆಗೆದುಕೊಳ್ಳುತ್ತಾರೆ, ಏನು ಡಿಸ್ಟ್ರಿಬ್ಯೂಟ್ ಮಾಡುತ್ತಾರೆ, ಅಷ್ಟು ಹಣ ಇವರಿಂದ ಬರದಿದ್ದರೆ ಇವರಿಗೆ ಸಂಬಳ ನಿಲ್ಲಿಸಿ. ಈ ರೀತಿ ಮಾಡಿದರೆ ಅವರು ದಾರಿಗೆ ಬರುತ್ತಾರೆ. ಇಲ್ಲದೇ ಹೋದರೆ ಅವರು ನಿಮ್ಮ ದಾರಿಗೆ ಬರುವುದಿಲ್ಲ. ಸರ್ಕಾರದವರು ಇದರ ಬಗ್ಗೆ ದೀರ್ಘವಾಗಿ ಯೋಚನೆ ಮಾಡಿ. ನಿಮಗೆ ಮೆಜಾರಿಟಿ

ಇದೆ. ಪಾಸ್ ಮಾಡಿಕೊಂಡು ಹೋಗುತ್ತೀರಿ. ಆದರೆ ನಾನು ಇದನ್ನು ಬಹಳ ನೊಂದು ಹೇಳುತ್ತಿದ್ದೇನೆ. ಕೆ.ಇ.ಬಿ.ಯವರಿಂದ ನಿಮಗೆ, ನಿಮ್ಮ ಪಕ್ಷಕ್ಕೆ, ನಿಮ್ಮ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಜನರು ನಿಮಗೆ ಶಾಪ ಹಾಕುತ್ತಿದ್ದಾರೆ. ಆದುದರಿಂದ ನಿಮಗೆ ನಾನು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಇದನ್ನು ತಕ್ಷಣ ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಅಲ್ಲಿರತಕ್ಕ ಭ್ರಷ್ಟ ಅಧಿಕಾರಿಗಳ ಮೇಲೆ ನೀವು ತೀವ್ರ ಕ್ರಮ ತೆಗೆದುಕೊಳ್ಳಬೇಕು. ಯಾರು ಯಾರು ಕಳ್ಳತನ ಮಾಡುತ್ತಿದ್ದರೆ, ಯಾರುಯಾರು ಖಾಸಗೀ ಕೈಗಾರಿಕೋದ್ಯಮಿಗಳಿಗೆ ಶಾಮೀಲಾಗಿದ್ದಾರೆ ಅಂಥವರನ್ನು ಪತ್ತೆ ಹಚ್ಚಿ ಕನಿಷ್ಠ 15-20 ಜನರಮೇಲೇ ಕ್ರಮವನ್ನು ತೆಗೆದುಕೊಳ್ಳತಕ್ಕ ದಿಟ್ಟ ಹೆಜ್ಜೆಯನ್ನಿಟ್ಟರೆ ಇದು ಸರಿಹೋಗುತ್ತದೆ. ಇದನ್ನು ತಾವು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ ಕೆ.ಇ.ಬಿ. ಬಗ್ಗೆ ಒಂದು ಶ್ವೇತ ಪತ್ರವನ್ನು ಪ್ರಕಟ ಮಾಡಬೇಕೆಂದು ಒತ್ತಾಯಮಾಡಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಸನ್ಮಾನ್ಯ ಅಧ್ಯಕ್ಷರೇ ಸಾಲ ಸಿಗುತ್ತದೆಂದು ಹೇಳಿ ಸಾಲ ಮಾಡಿಕೊಂಡು ಹೊರಟಿದ್ದೀರೋ ಅಥವಾ ನಮ್ಮ ರಿಸೋರ್ಸನ್ನು ಮೊಬಲೈಸ್ ಮಾಡಿಕೊಂಡು ಸಾಲವನ್ನು ಕಡಿಮೆ ಮಾಡುವ ಉದ್ದೇಶವೇನಾದರೂ ಸರ್ಕಾರಕ್ಕೆ ಇದೆಯೇ ಎಂದು ನಾನು ಸರ್ಕಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಸಾಲ ಸಿಗುತ್ತದೆಂದು ವಿಶ್ವಬ್ಯಾಂಕಿನಲ್ಲಿ ಸಾಲ ಮಾಡುವುದನ್ನು ಬಿಟ್ಟು ಇರು ರಿಸೋರ್ಸಸ್‌ನ್ನು ಮೊಬಲೈಸ್ ಮಾಡಿ. ಬಹಳಷ್ಟು ಇಂಡಸ್ಟ್ರೀಸ್‌ನವರು ಬಾಕಿ ಕೊಡಬೇಕು. ಇದರ ಬಗ್ಗೆ ಏನೇನು ಕ್ರಮ ಕೈಗೊಳ್ಳುತ್ತಿಲ್ಲ. ಅದರಲ್ಲೂ ಬಹಳ ಜನ ಆಳುವ ಪಕ್ಷಕ್ಕೆ ಸೇರಿದ್ದಾರೆ. ಅವರಮೇಲೆ ಒತ್ತಡ ತಂದು ಬಾಕಿ ವಸೂಲು ಮಾಡುವುದಕ್ಕೆ ತಾವು ಏಕೆ ಪ್ರಯತ್ನ ಮಾಡುತ್ತಿಲ್ಲ. ಕೋಟ್ಯಾಂತರ ರೂಪಾಯಿಗಳ ಬಾಕಿ ವಸೂಲು ಆಗಬೇಕಾಗಿತ್ತು. ಏತಕ್ಕೆ ನೀವು ಅವರ ಕಡೆ ಗಮನ ಕೊಡುತ್ತಿಲ್ಲ. ಈ ಕಡೆ ಕೂಡಲೇ ತಮ್ಮ ಗಮನವನ್ನು ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡುವಾಗ ಹೇಳಿದರು. 66 ಸಾವಿರ ಪಂಪ್‌ಸೆಟ್ಟುಗಳಿಗೆ ಈ ಸಾರಿ ಎನರ್ಜೈಸ್ ಮಾಡಿದ್ದೇವೆಂದು ಅದರಲ್ಲಿ ಎಷ್ಟು ಓಡುತ್ತದೆ. ಓಲ್ಟೇಜ್ 180 ಇದ್ದರೆ ಯಾವ ಸಬ್ಮರ್ಜಿಬಲ್ ಪಂಪ್ ಓಡುತ್ತದೆ? 66 ಸಾವಿರ ಜನರಲ್ಲಿ 40 ಸಾವಿರ ಜನರು ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಾರೆ. ತಮಗೆ ಗ್ರಾಮಾಂತರ ಪ್ರದೇಶಗಳಲ್ಲಿ ಹೋಗಲಿಕ್ಕೆ ಆಗುವುದಿಲ್ಲ. ಮೊನ್ನೆ ರಾತ್ರಿ ನಾನು ತೋಟದಲ್ಲಿದ್ದೆ. ನಾಲ್ಕು ಸಾರಿ ರಾತ್ರಿ ಪವರ್ ಹೋಯಿತು. 6 ಗಂಟೆಗಳ ಕಾಲ 8 ಗಂಟೆಗಳ ಕಾಲ ಕಂಟಿನ್ಯುಯಸ್ ಆಗಿ ನಿಲ್ಲಿಸಿ. ಇನ್ನು ಉಳಿದ 15 ಗಂಟೆಗಳ ಕಾಲವಾದರೂ ಕಂಟಿನ್ಯುಯಸ್‌ಆಗಿ ಪವರನ್ನು ಕೊಟ್ಟರೆ ಏನಾದರೂ ಒಂದು ಏರ್ಪಾಡು ಮಾಡಿಕೊಳ್ಳುತ್ತಾರೆ. ಅದಲ್ಲದೆ ಸುಮ್ಮನೆ ಕರೆಂಟ್‌ನ್ನು ನಿಲ್ಲಿಸಿದರೆ ಏನು ಪ್ರಯೋಜನ. ಸಿಸ್ಟಮ್ ಇಂಪ್ರೂವ್ ಮಾಡಿದರೆ, ಟ್ರಾನ್ಸ್‌ಫಾರ್ಮರ್ಸ್‌ನ್ನು ಸರಿಯಾಗಿ ಹಾಕದೆ, 60 ಸಾವಿರ ಕೊಟ್ಟರೆ ಅಲ್ಲ, ಒಂದು ಲಕ್ಷವನ್ನು ಕೊಟ್ಟರೆ ಏನು ಪ್ರಯೋಜನ? ಸುಮ್ಮನೆ ಸಾಲಮಾಡಿ ಜನರು ಕೊಡುತ್ತಾರೆಯೇ ವಿನಹ ಏನು ಪ್ರಯೋಜನವಾಗುವುದಿಲ್ಲ. ದಯವಿಟ್ಟು ಇದರ ಕಡೆ ಗಮನ ಕೊಡಬೇಕು. ಕಳೆದ ಒಂದು ವರ್ಷದಿಂದ ನಮ್ಮ ತಾಲ್ಲೂಕಿನಲ್ಲಿ ಒಂದು ಹಳ್ಳಿಗೂ ಎಲೆಕ್ಟ್ರಿಫಿಕೇಷನ್ ಆಗಲಿಲ್ಲ. ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಮುಗಿಸಿಬಿಟ್ಟಿದ್ದಾರೆ. ಕೆಲವು ಹಳ್ಳಿಗಳಲ್ಲಿ ಹೊಸ ಹೊಸದಾಗಿ ಕಾಲೋನಿಗಳಿವೆ. ಜನತಾ ಕಾಲೋನಿಗಳನ್ನು ಮಾಡಿ ನಮ್ಮ ಹರಿಜನ ಎಕ್ಸ್‌ಟೆನ್‌ಷನ್‌ಗಳಿಗೂ ಕೂಡಾ ವಿದ್ಯುತ್ ಕೊಡಲಿಕ್ಕೆ ನಿಮ್ಮ ಕೈಯಲ್ಲಿ ಆಗುತ್ತಿಲ್ಲ. ಇನ್ನು ಸಾಲಮಾಡಿ ಏನು ಮಾಡುತ್ತಿದ್ದೀರಿ. ಅದರ ಕಡೆ ಗಮನ ಕೊಡುತ್ತೀರಾ?

ಇನ್ನು ಲೈನ್‌ಮ್ಯಾನ್‌ಗಳು. ಅವರನ್ನು ಯಾರು ಸ್ವಾಮಿ ಮಾತನಾಡಿಸುವವರು? ಮಾತೆತ್ತಿದರೆ ಪ್ರಧಾನರನ್ನು ಬಯ್ಯುತ್ತಾರೆ. ಪ್ರಧಾನರು ಬಲ್ಬ್‌ಗಳನ್ನು ಹಾಕುವುದಕ್ಕೆ

ಆಗುವುದಿಲ್ಲ. ಒಬ್ಬ ಲೈನ್‌ಮ್ಯಾನ್‌ನ್ನು ಮಾತನಾಡಿಸುವುದಕ್ಕಾಗುವುದಿಲ್ಲ. ಅಸಿಸ್ಟೆಂಟ್ ಇಂಜಿನಿಯರ್‌ಗೂ ಆಗುವುದಿಲ್ಲ, ಎಕ್ಸಿಕ್ಯುಟೀವ್ ಇಂಜಿನಿಯರ್‌ಗೂ ಆಗುವುದಿಲ್ಲ. ಏನು ಮಾಡುತ್ತೀರಿ ಕೆ.ಇ.ಬಿ. ಚೇರ್‌ಮೆನ್ ಏನೋ ಒಳ್ಳೆಯ ಎಫಿಷಿಯೆಂಟ್ ಆಗಿರುವವರನ್ನು ಹಾಕಿದ್ದೀರಿ. ಒಬ್ಬರು ಏನು ಮಾಡಲಿಕ್ಕೆ ಸಾಧ್ಯವಾಗುತ್ತದೆ? ಏನು ಮಾಡುವುದಕ್ಕಾಗುವುದಿಲ್ಲ. ಕೆಳಗಡೆ ಲೆವಲ್‌ನಲ್ಲಿ ವೈರ್ ಮೆನ್‌ಗಳು ಆಮೇಲೆ ಇನ್‌ಸ್ಪೆಕ್ಟರ್ಸ್‌ಗಳು, ಅಸಿಸ್ಟೆಂಟ್ ಇಂಜಿನೀಯರ್ಸ್ ಮತ್ತು ಎಕ್ಸಿಕ್ಯುಟೀವ್ ಇಂಜಿನಿಯರ್ಸ್ ಇವರೆಲ್ಲರೂ ಏನಾದರೂ ಸ್ವಲ್ಪ ಡಿಸಿಪ್ಲೀನ್ ಉಳಿಸಿಕೊಂಡಿದ್ದರೆ ಒಳ್ಳೆಯದು. ಇಲ್ಲದಿದ್ದರೆ ಡಿಪಾರ್ಟ್‌ಮೆಂಟ್ ಉಳಿಯುವುದಿಲ್ಲ. ಹಾಗೆ ನೋಡಿದರೆ ಈ ಕಳ್ಳತನ ಮಾಡುವವರನ್ನು ಇವತ್ತಿನ ದಿವಸ ನಿಲ್ಲಿಸಿದರೆ ಸಾಕು, ನೀವು ಸಾಲ ಮಾಡುವುದೇ ಅನಾವಶ್ಯಕವೆಂದು ನಾನಾದರೂ ಘಂಟಾಘೋಷವಾಗಿ ಹೇಳುತ್ತೇನೆ. ನಮ್ಮ ಕಾಲದಲ್ಲಿ 2-3 ಕೇಸ್‌ಗಳನ್ನು ಹಿಡಿದಿದ್ದೆವು. ಅವರ ಮೇಲೆ ಪ್ರೆಷರ್ ಬಂದಿತು. ಒಂದು ಕಡೆ ಒಂದೊಂದು ಯೂನಿಟ್‌ನಲ್ಲಿ ಸುಮಾರು 15-20 ಲಕ್ಷ ರೂಪಾಯಿಗಳಷ್ಟು ಮಿಸ್‌ಯೂಸ್ ಆಗುತ್ತಿದ್ದು ಮಿಸ್ ಅಪ್ರೋಪ್ರಿಯೇಟ್ ಆಗುತ್ತಿದೆ. ಅವರನ್ನೇನಾದರೂ ಹಿಡಿದಿದ್ದೀರಾ? ಬೇಕಾದಷ್ಟು ಕಡೆ ಸಿಗುತ್ತದೆಂದು ಕಳ್ಳತನ ಮಾಡುತ್ತಾರೆ. ಮ್ಯಾಗನೇಟ್ ತೆಗೆದುಕೊಂಡು ಹಾಗೆ ಇಟ್ಟುಬಿಟ್ಟರೆ ಮೀಟರ್ ತಿರುಗುವುದಿಲ್ಲವೆಂದು ಹೇಳುತ್ತಾರೆ. ಆಮೇಲೆ ಹಿಂದಿನ ದಿವಸ ಹೋಗಿ ಆವತ್ತು ರೀಡಿಂಗ್ ಎಷ್ಟಿದೆ ಅದನ್ನು ತಿರುಗಿಸಿಬಿಟ್ಟು ಸೀಲ್ ಅದುಮಿಬಿಟ್ಟು ಬರುತ್ತಾರೆ, ದುಡ್ಡನ್ನು ತೆಗೆದುಕೊಳ್ಳುತ್ತಾರೆ. ಇದೆಲ್ಲಾ ನಡೆಯುತ್ತಿದೆ. ದಯವಿಟ್ಟು ಇದನ್ನು ನಿಲ್ಲಿಸುವ ಕಡೆ ತಾವು ಗಮನವನ್ನು ಕೊಡಿ.

ಇನ್ನು ಹಳ್ಳಿಗಳಲ್ಲಿ ಕೆಲವು ಕಡೆ ಭೂಸ್ಟರ್ಸ್‌ಗಳನ್ನು ಹಾಕಿಕೊಳ್ಳುತ್ತಾರೆ. ಇದರಿಂದ ಬೇರೆ ಪಂಪ್‌ಸೆಟ್ ಬಾವಿಗಳವರಿಗೆ ಪವರ್ ಸಪ್ಲೈ ಆಗುವುದಿಲ್ಲವಂತೆ. ಯಾರು ಭೂಸ್ಟರ್‌ನ್ನು ಹಾಕಿಕೊಂಡಿದ್ದಾರೋ ಅವರಿಗೆ 350-380 ವೋಲ್ಟೇಜ್ ಬರುತ್ತದೆ. ಮಿಕ್ಕನಾದವರಿಗೆ 150-160 ವೋಲ್ಟೇಜ್ ಬರುತ್ತದೆ. ಡಿಪಾರ್ಟ್‌ಮೆಂಟ್‌ನವರು ಹೋಗಿ ಇದನ್ನು ನಿಲ್ಲಿಸಬೇಕು ಇನ್ನೊಂದು ಆಶ್ಚರ್ಯವೇನೆಂದರೆ ನಮ್ಮ ತಾಲ್ಲೂಕಿನಲ್ಲಿ ಹುಲುಕುಂಟೆ ಎಂದು ಒಂದು ಗ್ರಾಮ ಇದೆ. ಅಲ್ಲಿ ಪದ್ಮಾವತಿ ಫೌಲ್‌ಟ್ರಿ ಎಂದು ಒಂದು ಫೌಲ್ಟ್ರಿ ಫಾರಮ್ ಇಟ್ಟುಕೊಂಡಿರುತ್ತಾರೆ. 5000ದಿಂದ 10000ದವರೆಗೆ ಬರ್ಡ್ಸ್‌ನ್ನು ಇಟ್ಟುಕೊಂಡಿರುತ್ತಾರೆ. ಆವರಿಗೆ ಬೇಕಾದ ಎಲ್ಲಾ ಫುಡ್‌ನ್ನು ಅವರೇ ಅಲ್ಲಿಯೇ ಮಾಡಿಕೊಳ್ಳುತ್ತಿದ್ದಾರೆ. ಯಾವುದೋ ತಂತಿಯನ್ನು ಹಾಕಿಕೊಂಡು ಡೈರೆಕ್ಟಾಗಿ ಪವರ್ ತೆಗೆದುಕೊಳ್ಳುತ್ತಿದ್ದಾರೆಂದು ವದಂತಿ. ಅದರ ಜೊತೆಗೆ ಅಲ್ಲಿ ವೆಲ್ಡಿಂಗ್ ಯೂನಿಟ್‌ನ್ನು ಇಟ್ಟುಕೊಂಡು ಬೆಂಗಳೂರಿಗೆ ವೆಲ್ಡ್‌ಮಾಡಿ ಸಾಮಾನುಗಳನ್ನು ಸಪ್ಲೈ ಮಾಡುತ್ತಿದ್ದಾರೆ. ಅವರನ್ನು ಎರಡು ಸಾರಿ ಹಿಡಿದುಕೊಂಡು ಬಂದಿದ್ದಾರೆ. ಆದರೆ ಎರಡುಸಾರಿ ಇನ್‌ಫ್ಲೂಯೆನ್ಸ್ ಮಾಡಿ ಬಿಡಿಸಿದ್ದಾರೆ. ಈ ರೀತಿ ಸರ್ಕಾರ ಸಾಲ ಮಾಡಿಮಾಡಿ ಸರ್ಕಾರ ಉಳಿಯಬೇಕೆ ವಿನಹ ಜನ ಉದ್ಧಾರವಾಗುವಂತಿಲ್ಲ. ಇದನ್ನೆಲ್ಲಾ ಸರಿಮಾಡದೆ ಎಲ್ಲಿ ಸಾಲ ಸಿಗುತ್ತದೆಂದರೆ ಅಲ್ಲಿ ಸಾಲವನ್ನು ತೆಗೆದುಕೊಂಡು ಬರುವುದು ವೇಸ್ಟ್ ಮಾಡುವುದು ಆಗುತ್ತಿದೆ. ಹೀಗಾಗಿ ಇವತ್ತು ರಾಷ್ಟ್ರ ಮಟ್ಟದಲ್ಲೂ ಇದೇ ಗೋಳು, ರಾಜ್ಯ ಮಟ್ಟದಲ್ಲೂ ಇದೇ ಗೋಳಾಗಿದೆ. ಹೀಗಾದರೆ ದೇಶದ ಮುಂದಿನ ಗತಿ ಏನಾಗಬೇಕು ದಯವಿಟ್ಟು ಸಾಲ ಮಾಡುವುದನ್ನು ಕಡಿಮೆ ಮಾಡಿ ಇರುವ ರಿಸೋರ್ಸ್‌ಸ್‌ನ್ನು ಇಂಪ್ರೂವ್ ಮಾಡಿ. ಲೀಕೇಜ್ ಕಡಿಮೆ ಮಾಡುವ ಕಡೆ ಸರ್ಕಾರ ಗಮನಕೊಡಬೇಕೆಂದು ಹೇಳಿ ತಂದಿರುವ ಮಸೂದೆಯನ್ನು ವಿರೋಧಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಇದೇ ಸಂದರ್ಭದಲ್ಲಿ ಬೇರೆ ವಿಚಾರ, ತಮ್ಮ ಗಮನಕ್ಕೆ ತರಬಯಸುತ್ತೇನೆ. ನಮ್ಮ ಸ್ನೇಹಿತರು ರೈತರ ಪರವಾಗಿ

ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿ ಧರಣಿ ಮಾಡುತ್ತಿದ್ದಾರೆ. ತಾವು ಈ ಸದನ ಅವರ ಕಡೆ ಗಮನವಿಲ್ಲದೆ ಸಭೆಯನ್ನು ನಡೆಸಿಕೊಂಡು ಹೋಗುತ್ತಿರತಕ್ಕಂಥದ್ದು ಸರಿಯೇ ಎನ್ನುವ ಪ್ರಶ್ನೆ? ಆದ್ದರಿಂದ ದಯವಿಟ್ಟು ತಾವು ಅಧ್ಯಕ್ಷರಾಗಿದ್ದೀರಿ, ಕೊನೆಯ ದಿವಸ ಒಂದು ಮಧುರವಾದ ವಾತಾವರಣವನ್ನು ನಿರ್ಮಾಣ ಮಾಡಿ. ಅವರು ಕೇಳತಕ್ಕಂಥದ್ದು ಪ್ರಾಮಾಣಿಕವಾಗಿ ಕೇಳುತ್ತಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಚುನಾವಣೆಯ ಬಗ್ಗೆ, ಚುನಾವಣೆಯನ್ನು ಹಿನ್ನೆಲೆಯಾಗಿಟ್ಟುಕೊಂಡು ಇದೆಲ್ಲವನ್ನು ಹೇಳಿದ್ದಾರೆ. ಮಾನ್ಯ ಯಡಿಯೂರಪ್ಪರವರು ಅವರ ಸ್ನೇಹಿತರು ಕುಳಿತಿರುವಾಗ ತಾವು ಅವರು ಹಾಗೆಯೇ ಕುಳಿತಿರಲಿ, ಸಭೆಯನ್ನು ನಡೆಸಿಕೊಂಡು ಹೋಗೋಣವೆಂದು ನಡೆಸಿಕೊಂಡು ಹೋಗುವುದು ಸರಿಯಲ್ಲ. ದಯವಿಟ್ಟು ತಮ್ಮ ಗಮನ ಸೆಳೆಯುತ್ತಿದ್ದೇನೆ, ಅಲ್ಲಿ ಕುಳಿತಿರುವ ಮಾನ್ಯ ಮಿತ್ರರು ಮೇಲಕ್ಕೆ ಎದ್ದು ಬಂದು ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವಂತೆ ಮಾಡಿ.

ಉಪಾಧ್ಯಕ್ಷಿಣಿಯವರು : ಅದರ ಬಗ್ಗೆ ಬೆಳಿಗ್ಗೆ ಮಾನ್ಯ ಅಧ್ಯಕ್ಷರು ಅವರನ್ನು ಕೇಳಿಕೊಂಡಿದ್ದಾರೆ. ತಾವು ತಮ್ಮ ತಮ್ಮ ಆಸನಗಳಿಗೆ ಬರಬೇಕೆಂದು ಕೋರಿದ್ದಾರೆ. ಮಾನ್ಯ ಸಭಾನಾಯಕರು ಹೇಳಿದ್ದಾರೆ. ಮತ್ತೆ ನಾನು ಕೇಳುತ್ತೇನೆ, ಮಾನ್ಯ ಸದಸ್ಯರು ತಮ್ಮ ಆಸನಗಳಿಗೆ ಬಂದು, ಕೊನೆಯ ದಿನದ ಸಭೆಯಲ್ಲಿ ಎಲ್ಲರ ಜೊತೆ ಭಾಗವಹಿಸಬೇಕೆಂದು ಮತ್ತೊಮ್ಮೆ ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಸ್ನೇಹಿತರಾದ ಯಡಿಯೂರಪ್ಪರವರು ಮತ್ತಿತರ ಸ್ನೇಹಿತರು ತಮ್ಮ ಮಾತನ್ನು ಗೌರವಿಸಬೇಕೆಂದು ನಾನೂ ಕೂಡ ಅವರನ್ನು ಕೈಮುಗಿದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾವು ಮೊದಲಿನಿಂದಲೂ ನಿಮ್ಮ ಪರ ಇದ್ದೇವೆ. ಸಭಾತ್ಯಾಗ ಮಾಡಿದ್ದೇವೆ. ಈಗ ತಾವು ತಮ್ಮ ಪ್ರಾಮಾಣಿಕತನ ರೈತರ ಬಗ್ಗೆ ಏನಿದೆ ಎಂದು ರಾಜ್ಯದ ಜನತೆಗೆ ತಿಳಿಸಿದ್ದೀರಿ. ನಿಮ್ಮ ಧರಣಿ ಮತ್ತು ನಿಮ್ಮ ನೀತಿಯ ತತ್ವದ ಜೊತೆಯಲ್ಲಿ ನಾವು ಸಂಪೂರ್ಣ ಸಹಭಾಗಿಯಾಗಿದ್ದೇವೆ, ಇದರಲ್ಲಿ ಎರಡನೆಯ ಅಭಿಪ್ರಾಯವಿಲ್ಲ. ನಾವು ನೀವೆಲ್ಲ ಒಂದೇ. ಆದ್ದರಿಂದ ದಯಮಾಡಿ ಮಾನ್ಯ ಅಧ್ಯಕ್ಷರ ಮಾತಿಗೆ ಕೊನೆಯ ದಿವಸವಾದ್ದರಿಂದ ಗೌರವ ಕೊಡಿ ಎಂದು ಹೇಳುತ್ತೇನೆ. ನಾಳೆ ನಾಡಿದ್ದು ಸದನ ಇದ್ದಿದ್ದರೆ ಆ ಮಾತು ಬೇರೆ. ಆದುದರಿಂದ ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ನಿಮ್ಮ ಜೊತೆಯಲ್ಲಿ ನಾವು ಸೇರಿದ್ದೇವೆ. ನಿಮ್ಮ ನೀತಿ, ಬೇಡಿಕೆ ಬಗ್ಗೆ ನಮ್ಮ ಸಂಪೂರ್ಣ ಬೆಂಬಲ ಇದೆ. ದಯಮಾಡಿ ಬನ್ನಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯರಾದ ನಾಗರಾಜು ಅವರು ಮತ್ತು ಬೈರೇಗೌಡರು ಹೇಳಿದ ಹಾಗೆ ಸದನ ಮುಂದುವರಿಯುವುದಾದರೆ ಕುಳಿತುಕೊಳ್ಳಿ. ಆದರೆ ಸದನ ಮುಗಿಯುತ್ತಿರುವ ಸಂದರ್ಭದಲ್ಲಿ ತಮ್ಮನ್ನು ಅಲ್ಲಿ ಕೂರಿಸಿ ಸದನವನ್ನು ಮುಗಿಸುವುದು ಔಚಿತ್ಯ ಅಲ್ಲವೆಂದು ತಿಳಿದುಕೊಂಡಿದ್ದೇನೆ. ಸರ್ಕಾರ ರೈತರ ಪರವಾಗಿ ಸಹಾನುಭೂತಿಯಿಂದ ಚರ್ಚೆ ಮಾಡಿದೆ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ರೈತರ ಪರವಾಗಿ ಇಲ್ಲವೆಂದು ಧರಣಿ ಕುಳಿತಿರಬೇಕು. ಅವರು ಧರಣಿ ಕುಳಿತಿರುವುದು ಸರ್ಕಾರ ರೈತರ ಪರವಾಗಿ ಇಲ್ಲವೆಂದು

ಉಪಾಧ್ಯಕ್ಷಿಣಿಯವರು : ಅದು ನಿಮ್ಮ ಅಭಿಪ್ರಾಯ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಯಡಿಯೂರಪ್ಪನವರಲ್ಲಿ ವಿನಂತಿಸುತ್ತೇನೆ. ದಯಮಾಡಿ ಆಸನಕ್ಕೆ ಬಂದು ಕುಳಿತು ಚರ್ಚೆಯಲ್ಲಿ ಪಾಲ್ಗೊಳ್ಳಬೇಕು.

ಶ್ರೀ ಸಿ. ಬೈರೇಗೌಡ : ಕೊನೆಯ ದಿವಸ ಆರೂಕಾಲು ಗಂಟೆಯಾಗುತ್ತಿದೆ. ಆದ್ದರಿಂದ ತಾವು ಕೊನೆಯ ಕಾಲದಲ್ಲಿ ಅಲ್ಲಿ ಕುಳಿತುಕೊಳ್ಳುವುದು ಬೇಡ. ಪ್ರಜಾಪ್ರಭುತ್ವ ನೀತಿಗನುಸಾರವಾಗಿ ಯಾವ ಮಟ್ಟದಲ್ಲಿ ಪ್ರತಿಭಟನೆ ತೋರಿಸಬೇಕು ಅದನ್ನು ತೋರಿಸಿದ್ದೀರಿ. ಇದನ್ನು ಅಷ್ಟಕ್ಕೆ ಮಿತಿ ಮಾಡಿ ದಯವಿಟ್ಟು ತಮ್ಮ ಸ್ಥಾನಗಳಿಗೆ ಬರಬೇಕೆಂದು ಮತ್ತೊಮ್ಮೆ ನನ್ನ ಪರವಾಗಿ ಮತ್ತು ಅಧ್ಯಕ್ಷರು ತಮಗೆ ತಿಳಿಸಿದ್ದಾರೆ, ಅವರ ಪರವಾಗಿ ತಮ್ಮನ್ನು ಕೇಳಿಕೊಳ್ಳುತ್ತೇನೆ. ದಯವಿಟ್ಟು ತಮ್ಮತಮ್ಮ ಆಸನಗಳಿಗೆ ಬರಬೇಕೆಂದು ಮಾನ್ಯ ಯಡಿಯೂರಪ್ಪನವರಲ್ಲಿ ಮತ್ತು ಅವರ ಮಿತ್ರರಲ್ಲಿ ಆಗ್ರಹಪೂರ್ವಕವಾಗಿ ವಿನಂತಿಸುತ್ತೇನೆ.

ಮಾನ್ಯ ಉಪಾಧ್ಯಕ್ಷಿಣಿಯವರೇ, ಸರ್ಕಾರ ಈ ವಿದ್ಯುತ್ ಮಂಡಲಿಗೆ ವಿಶ್ವ ಬ್ಯಾಂಕ್ ನೆರವಿನಿಂದ ಪಡೆಯತಕ್ಕ ಸಾಲಕ್ಕೆ ಅನುಗುಣವಾಗಿ ಸ್ಟ್ಯಾಟ್ಯುಟರಿ ರೆಸಲ್ಯೂಷನ್ ಅನ್ನು ಸದನದ ಒಪ್ಪಿಗೆಗಾಗಿ ಮಂಡಿಸಿದ್ದಾರೆ. ಇದನ್ನು ಮಂಡಿಸಿರತಕ್ಕ ಸಂದರ್ಭದಲ್ಲಿ ನಾನು ಕೆಲವು ವಿಚಾರಗಳನ್ನು ಸಭೆಯ ಗಮನಕ್ಕೆ ತರತಕ್ಕದ್ದು ನನ್ನ ಕರ್ತವ್ಯವಾಗಿದೆ. ಕಾರಣ ಏನೆಂದರೆ ಇವತ್ತು ನಮಗೆ, ಅದರಲ್ಲೂ ಕೂಡ ಬಯಲು ಸೀಮೆಯಲ್ಲಿರತಕ್ಕ ರೈತರಿಗೆ ವಿದ್ಯುತ್ ಇಲ್ಲದೆ ಅವರಿಗೆ ಜೀವವೆ ಇಲ್ಲ, ಪ್ರಾಣವೇ ಇಲ್ಲ, ನಮಗೆ ಪ್ರಾಣ ಎಂದರೆ ವಿದ್ಯುಚ್ಛಕ್ತಿ. ಇದರ ಬಗ್ಗೆ ಅನೇಕ ಸಾರಿ ಈ ಸದನದಲ್ಲಿ ಕೂಡ ಚರ್ಚೆಯಾಗಿದೆ. ಆದರೆ ಇಲ್ಲಿಯವರೆಗೆ ಕೂಡ ಸಮರ್ಪಕವಾದ ಉತ್ತರ ಅಥವಾ ಸಮರ್ಪಕವಾದ ಕಾರ್ಯಕ್ರಮವನ್ನು ಈ ಭಾಗದ ಜನರಿಗೆ ವಿದ್ಯಚ್ಛಕ್ತಿ ಮಂಡಲಿಯವರು ಹಾಕಿಲ್ಲ, ಇದರ ಬಗ್ಗೆ ಬಹಳ ಒತ್ತಾಯಪೂರ್ವಕವಾಗಿ ಜನರೂ ಕೂಡ ಬೀದಿಗಿಳಿದು ಚಳುವಳಿ ಮಾಡಿದ್ದಾರೆ. ಅನೇಕ ಕಡೆ ವಿದ್ಯುಚ್ಛಕ್ತಿ ಮಂಡಳಿ ಕಚೇರಿಗಳಿಗೆ ಬೀಗ ಹಾಕಿ ಅಲ್ಲಿಯೂ ಕೂಡ ಚಳುವಳಿ ಮಾಡಿದ್ದಾರೆ. ನಾನು ಕೂಡ ಅಂಥ ಅನೇಕ ಚಳುವಳಿಗಳಲ್ಲಿ ಭಾಗವಹಿಸತಕ್ಕ ಪರಿಸ್ಥಿತಿ ಬಂದಿತ್ತು. ಆದರೂ ಇಲ್ಲಿಯವರೆಗೆ ಕೂಡ ಪರಿಸ್ಥಿತಿ ಸುಧಾರಣೆ ಆಗಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿ ಏನು ಮಾಡುತ್ತಾರೆಂದರೆ ಗ್ರಾಮಾಂತರ ಪ್ರದೇಶ, ನಗರ ಪ್ರದೇಶ ಎಂದು ಸರ್ಕಾರದವರೆ ವ್ಯತ್ಯಾಸ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ಐದು ನಿಮಿಷ ಹತ್ತು ನಿಮಿಷ ವಿದ್ಯುಚ್ಛಕ್ತಿ ಹೋಗಬಹುದು. ಅಷ್ಟೆ. ಕೆಲವು ಕಡೆ ಅರ್ಧ ಗಂಟೆ ಹೋಗಬಹುದು. ಅಷ್ಟು ಬಿಟ್ಟರೆ ಉಳಿದಂಥ ಸಂದರ್ಭದಲ್ಲಿ ಸಂಪೂರ್ಣವಾಗಿ ವಿದ್ಯುತ್ ಸರಬರಾಜಿರುತ್ತದೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಏನು ಮಾಡುತ್ತಿದ್ದಾರೆ? ಅವರ ಅಧಿಕೃತ ತೀರ್ಪಿನ ಪ್ರಕಾರ 18 ಗಂಟೆ ಕಾಲ ಮಾತ್ರ ವಿದ್ಯುತ್ ಕೆಲವು ಕಡೆ ಕೊಡುತ್ತಿದ್ದಾರೆ? ಹೋಗಲಿ ಅದಾದರೂ ಸಮರ್ಪಕವಾಗಿ ಸಕ್ರಮವಾಗಿ ವಿದ್ಯುತ್ ಇರುತ್ತದೆಯೇ ಅಂದರೆ ಅದು ಕೂಡ ಇರುವುದಿಲ್ಲ, ಕೆಲವು ಕಡೆ 24 ಗಂಟೆಯಲ್ಲಿ ಐದಾರು ಗಂಟೆಯೂ ಕೂಡ ಇವತ್ತಿನ ದಿವಸ ವಿದ್ಯುತ್ ಇರುವುದಿಲ್ಲ, ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಆಗಲಿ ಅಥವಾ ಏನೇ ಕೆಲಸ ಮಾಡಬೇಕಾದರೂ ಇವತ್ತು ವಿದ್ಯುತ್ ಬೇಕೇಬೇಕು. ಇದನ್ನು ಕೇಳಿದರೆ ಏನು ಹೇಳುತ್ತಾರೆ, ಹಿಂದೆ ನಿಮ್ಮ ಸರ್ಕಾರ ಇತ್ತು, ನೀವು ಏನೂ ಮಾಡಲಿಲ್ಲ, ಆದ್ದರಿಂದ ಹೀಗಾಗಿದೆ ಎಂದು ಒಂದು ಸಾರಿ ಅಲ್ಲ, ಅನೇಕ ಸಂದರ್ಭದಲ್ಲಿ ಸರ್ಕಾರದವರು ಈ ಮಾತನ್ನು ಹೇಳಿದ್ದಾರೆ. ಹೌದು, ನಿಜ. ಆಗಲೂ ಮಾಡಲಿಲ್ಲ, ಆಗಲೂ ಕೂಡ ಆಗ್ರಹ ಇತ್ತು. ಆದರೂ ಆಗಲಿಲ್ಲ. ಆದರೆ ಅದನ್ನೇ ನೀವು ಇವತ್ತು ಮುಂದುವರೆಸಿಕೊಂಡು ಹೋಗುತ್ತೇವೆ ಎಂದು ಹೇಳುವ ವಾದ ಸರಿಯೇ ಎನ್ನತಕ್ಕದ್ದು ಇವತ್ತಿನ ದಿವಸ ಯೋಚನೆ ಮಾಡಬೇಕು. ಇನ್ನೊಂದು ಎಂದರೆ ಲೈನ್ ಮಿನಿಮಂ ಲಾಸಸ್ ರಾಜ್ಯದಲ್ಲಿ ಶೇಕಡ 22ರಷ್ಟು ಇವತ್ತಿನ ದಿವಸ ಇದೆ. ಆದರೆ ಇತ್ತೀಚಿನ ಅಂಕಿಅಂಶದ ಪ್ರಕಾರ ಅದು ಕಡಿಮೆಯಾಗಿದೆ ಎಂದು ಹೇಳುತ್ತಿದ್ದಾರೆ.

ಶೇಕಡ 18-19ರವರೆಗೆ ಇಳಿದಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ನಾನು ಇದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಏತಕ್ಕೆ ಇದಾಗುತ್ತಿದೆ ಎಂದರೆ ಅನೇಕ ಕಡೆ ಅದರಲ್ಲೂ ದೊಡ್ಡದೊಡ್ಡ ಕೈಗಾರಿಕೆಗಳಲ್ಲಿ ನಡೆಯುತ್ತಿರುವ ವಿದ್ಯುತ್ ಕಳುವು ಇನ್ನೆಲ್ಲೂ ಕೂಡ ನಡೆಯುತ್ತಿಲ್ಲ. ವಿದ್ಯುತ್ ಮಂಡಲಿ ನೌಕರರು ಹೋಗಿ ದಿವಸ ಮೀಟರ್ ಬೈಪಾಸ್ ಮಾಡಿ ಅವರಿಗೆ ವಿದ್ಯುತ್ ಸರಬರಾಜು ಮಾಡುತ್ತಾರೆ. ಪುನಃ ರೀಡಿಂಗ್ ಎಲ್ಲಾ ಸರಿಪಡಿಸತಕ್ಕ ಕೆಲಸ ಕೂಡ ಮಾಡುತ್ತಾರೆ. ಕೆಂಪೇಗೌಡ ರಸ್ತೆಯಲ್ಲಿ ವಿದ್ಯುಚ್ಛಕ್ತಿ ಮಂಡಳಿ ಕಛೇರಿ ಇದೆ. ಅದರ ಎದುರುಗಡೆ ಕಬ್ಬನ್‌ಪೇಟೆ ಇದೆ. ಆ ಕಬ್ಬನ್‌ಪೇಟೆಯಲ್ಲಿ ಸಾವಿರಾರು ವಿದ್ಯುತ್ ಚಾಲನೆ ಮಾಡತಕ್ಕ ಮಗ್ಗಗಳಿವೆ. ಅಲ್ಲಿ ಒಂದು ಪದ್ಧತಿ ಜಾರಿಯಲ್ಲಿದೆ ಎಂದು ನನಗೆ ತಿಳಿದುಬಂದಿದೆ. ಏನೆಂದರೆ ಬೆಳಿಗ್ಗೆ ಅಲ್ಲಿರತಕ್ಕ ಕೆಲಸಗಾರರನ್ನು ಒಳಗೆ ಹಾಕಿ ಬೀಗ ಹಾಕಿಬಿಡುತ್ತಾರೆ. ಅವರನ್ನು ಹೊರಗಡೆ ಕೂಡ ಬಿಡುವುದಿಲ್ಲ. ಏಕೆಂದರೆ ವಿದ್ಯುತ್ ಮೀಟರ್ ಎಲ್ಲಾ ಒಳಗಡೆ ಇರುತ್ತದೆ. ವಿದ್ಯುಚ್ಛಕ್ತಿ ಮಂಡಳಿಯವರು ಯಾರೂ ಕೂಡ ಒಳಗಡೆ ಹೋಗುವಹಾಗಿಲ್ಲ. ಅಲ್ಲಿ ಕಳ್ಳತನದಲ್ಲಿ 24 ಗಂಟೆ ವಿದ್ಯುತ್ ಮಗ್ಗಗಳು ಚಾಲನೆಯಲ್ಲಿರುತ್ತದೆ. ವಿದ್ಯುತ್ ಮಗ್ಗಗಳಲ್ಲಿ ಮಾತ್ರ ಅಲ್ಲ, ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಈ ವಿದ್ಯುತ್ ಕಳ್ಳತನ ಯಥೇಚ್ಛವಾಗಿ ಇವತ್ತಿನ ದಿವಸ ನಡೆಯುತ್ತಿದೆ. ಇದನ್ನು ತಪ್ಪಿಸಬೇಕಾಗಿರತಕ್ಕದ್ದು ಸರ್ಕಾರದ ಆದ್ಯ ಕರ್ತವ್ಯ. ಅದಕ್ಕೆ ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ ಅಲ್ಲಿ ಯಾರು ಬಳಕೆದಾರರಿರುತ್ತಾರೋ ಅವರ ಜಾಗದಲ್ಲಿ ಒಂದು ಮೀಟರ್ ಇಡಿ. ಸಪ್ಲೈ ಲೈನ್ ಬೇರೆ ಇರುತ್ತದೆ ಅದಕ್ಕೆ. ದೊಡ್ಡ ಟ್ರಾನ್ಸ್‌ಫಾರ್ಮರ್ ಸೆಂಟರ್ ಇರುತ್ತದೆ. ಅಲ್ಲಿ ಒಂದು ಮೀಟರ್ ಇಡಿ. ಆಗ ಕಳ್ಳತನ ಸಿಗುತ್ತದೆ. ಎರಡೂ ಮೀಟರ್ ಸರಿಯಾಗಿ ಓಡಿದರೆ ಅಥವಾ ಒಂದೇ ಅಳತೆಗೆ ಎರಡೂ ಮೀಟರ್ ಇದ್ದರೆ ವಿದ್ಯುತ್ ಕಳ್ಳತನ ಆಗಿಲ್ಲ ಎಂದು ನಾವು ತೀರ್ಮಾನ ಮಾಡಬೇಕಾಗುತ್ತದೆ. ದೊಡ್ಡ ಹಣ ಅದಕ್ಕೆ ಖರ್ಚಾಗುವುದಿಲ್ಲ. ಎಕ್ಸ್‌ಟ್ರಾ ಮೀಟರ್ ಹಾಕುವುದರಿಂದ ದೊಡ್ಡ ದೊಡ್ಡ ಕನ್ಸ್ಯೂಮರ್‌ಗೆ ಹೆಚ್ಚು ಹಣ ಖರ್ಚಾಗುವುದಿಲ್ಲ.

6.25 ಪಿ.ಎಂ.

ಇವತ್ತು ಒಂದು ದಿನ ಆಗುವ ವಿದ್ಯುತ್ ಕಳ್ಳತನವನ್ನು ನಿಲ್ಲಿಸಿದರೆ ಬರುವ ಆದಾಯದಿಂದ ನಾವು ಈ ಬಗ್ಗೆ ಅಳವಡಿಸಬೇಕಾದ ಎಲ್ಲಾ ಮೀಟರ್‌ಗಳನ್ನು ಕೊಂಡು ಅಳವಡಿಸಬಹುದು. ವಿದ್ಯುತ್ ಮಂಡಲಿಯಲ್ಲಿ, ವಿದ್ಯುತ್ ಕಳ್ಳತನ ನಿಲ್ಲಿಸಲು ಆದಷ್ಟು ಜಾಗ್ರತೆ ನಾನು ತಿಳಿಸಿದ ಪ್ರಕಾರ ವಿದ್ಯುತ್ ಮೀಟರ್‌ಗಳನ್ನು ಅಳವಡಿಸಬೇಕೆಂದು ಹೇಳುತ್ತೇನೆ. ಇವತ್ತು ವಿದ್ಯುತ್ ಕಡಿತವನ್ನು ಎಲ್ಲರಿಗೂ ಮಾಡುತ್ತಿದ್ದೀರಿ. ನಮ್ಮ ಕಡೆ 18 ಗಂಟೆಗಳ ಕಾಲ ವಿದ್ಯುತ್ ಸರಬರಾಜಾಗುತ್ತದೆಂದು ಇಟ್ಟುಕೊಂಡರೂ 6 ಗಂಟೆಗಳ ಮಟ್ಟಿಗೆ ವಿದ್ಯುತ್ ಸರಬರಾಜೇ ಆಗುವುದಿಲ್ಲ. ಆದರೆ ಇಂತಹ ಕ್ರಮವನ್ನೂ ಕೈಗಾರಿಕೆಗಳಿಗೆ ಏಕೆ ಅಳವಡಿಸಿಲ್ಲ ಎಂದು ಕೇಳಿದರೆ, ಅವರಿಗೆ ಶೇಕಡಾ 50ರಷ್ಟು ಕಡಿತ ಇದೆ ಎಂದು ಹೇಳುತ್ತಾರೆ. ಅವರ ಶೇಕಡಾ 50ರಷ್ಟು ಕಡಿತ ಬರೀ ಕಾಗದದ ಮೇಲೆ ಇದೆ ಎಂದು ಹೇಳುತ್ತೇನೆ. ಇವತ್ತು ಅವರು ಕಡಿತ ಪ್ರಮಾಣವನ್ನು ಮೀರಿ ವಿದ್ಯುತ್ ಬಳಸಿದರೆ ಪೀನಲ್ ರೇಟ್ ಕೊಡಬೇಕೆಂದಿದೆ. ಮನೆಗಳಿಗೆ 200 ಯೂನಿಟ್ಸ್ ಎಂದು ಇದ್ದರೆ, ಅದಕ್ಕಿಂತ ಹೆಚ್ಚು ಖರ್ಚು ಮಾಡಿದರೆ ಯೂನಿಟ್ ಕಾಸ್ಟ್ ಜಾಸ್ತಿಯಾಗುತ್ತದೆ. ಇದೇ ನಿಯಮ ಕೈಗಾರಿಕೆಗಳಿಗೂ ಅನ್ವಯಿಸುತ್ತದೆ. ಇವತ್ತು ಎಷ್ಟು ಕೈಗಾರಿಕೆಗಳಲ್ಲಿ ಹೆಚ್ಚುವರಿ ಬಳಕೆಗೆ ಎಷ್ಟು ಪೆನಾಲ್ಟಿ ಹಾಕಿ ಹೆಚ್ಚು ವಸೂಲಿ ಮಾಡಿದ್ದೀರಿ ಎನ್ನುವ ಬಗ್ಗೆ ತಾವು ವಿವರ ಕೊಟ್ಟರೆ ಅದರಿಂದಲೇ ತಮಗೆ ಗೊತ್ತಾಗುತ್ತದೆ. ಈ ಶೇಕಡಾ 50 ವಿದ್ಯುತ್ ಕಡಿತ ಕೇವಲ ಕಾಗದದ ಮೇಲೆ

ಮಾತ್ರ ಇದೆ. ಇವತ್ತು ವ್ಯವಸಾಯ ರಂಗದಲ್ಲಿ ಲೈನ್‌ನಲ್ಲೇ ವಿದ್ಯುತ್ ಇರುವುದಿಲ್ಲ. ರೋಸ್ಟರ್ ಸಿಸ್ಟಮ್ ಪ್ರಕಾರ 6 ಗಂಟೆಗಳ ಕಾಲ ಒಂದೊಂದು ಕಡೆ ವಿದ್ಯುತ್ ನಿಲುಗಡೆಯಾಗುತ್ತದೆ. ಆದರೆ ಈ ವ್ಯವಸ್ಥೆ ಕೈಗಾರಿಕೆಗಳಿಗೆ ಇಲ್ಲ. ಈ ವಿದ್ಯುತ್ ಕಡಿತ ಕಾಗದದಮೇಲೆ ಇರುತ್ತದೆಯೇ ವಿನಃ ಸರಬರಾಜಾಗತಕ್ಕ ಲೈನ್ನಲ್ಲಿ ವಿದ್ಯುತ್ ತೆಗೆಯುವುದಿಲ್ಲ. ಇದರಿಂದಾಗಿ ವಿದ್ಯುತ್ ದುರ್ಬಳಕೆಯಾಗುತ್ತದೆ. ವಿದ್ಯುತ್ ಲೈನ್ ಲಾಸ್ನಿಂದಾಗಿ ಲಕ್ಷಾಂತರ, ಕೋಟ್ಯಾಂತರ ರೂಪಾಯಿ ಪ್ರತಿದಿವಸ, ಪ್ರತಿ ತಿಂಗಳು, ಪ್ರತಿ ವರ್ಷ ನಷ್ಟವಾಗುತ್ತಿದೆ. ಇದನ್ನು ಸರಿಪಡಿಸತಕ್ಕ ಕೆಲಸ ಆಗಬೇಕು. ಈ ಕೆಲಸ ಆದರೆ ನಾವು ವಿಶ್ವಬ್ಯಾಂಕಿನಿಂದ ಬರುವ ನೆರವಿಗೆ, ಅಥವಾ ಬೇರೆ ನೆರವಿಗೆ ಹೋಗುವ ಅವಶ್ಯಕತೆ ಇಲ್ಲ. ಇವತ್ತು ಇಲಾಖೆಯಲ್ಲಿ ಸಣ್ಣಪುಟ್ಟ ಖರ್ಚು ಮಾಡಿದರೂ ಕೂಡಾ ಅದರ ಪ್ರತಿಫಲ ದೊಡ್ಡ ಪ್ರಮಾಣದಲ್ಲಿ ಆಗುತ್ತದೆ. ಈ ಬಗ್ಗೆ ನಾನು ಮೊದಲಿನಿಂದಲೂ ಕೂಡಾ ಸಲಹೆ ಕೊಟ್ಟುಕೊಂಡು ಬಂದಿದ್ದೇನೆ. ಈಗ ಸಂಸದೀಯ ಸಚಿವರ ಗಮನಕ್ಕೆ ಒಂದು ವಿಷಯ ತರುತ್ತೇನೆ. ಈ ಬಗ್ಗೆ ಸದನದ ಸಮಿತಿಯನ್ನು ಮಾಡಿ, ಅದು ಇದರ ಬಗ್ಗೆ ಪರಿಶೀಲನೆ ಮಾಡಿ ಸರ್ಕಾರಕ್ಕೆ ವರದಿಯನ್ನು ಕೊಡತಕ್ಕದ್ದಕ್ಕೆ ಏರ್ಪಾಡು ಮಾಡಬೇಕು. ಮಾತನಾಡಲು ಇನ್ನೂ ಅನೇಕ ವಿಚಾರಗಳು ಇವೆ. ಕಾಲಾವಕಾಶದ ಮಿತಿಯಿಂದಾಗಿ ಅದನ್ನು ಹೇಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಸದನದ ಸಮಿತಿ ನೇಮಕ ಮಾಡಿದರೆ ಚರ್ಚೆ ಮಾಡುವುದಕ್ಕೆ ಅವಕಾಶವಾಗುತ್ತದೆ ಹಾಗೂ ಆ ಬಗ್ಗೆ ಬೆಳಕು ಚೆಲ್ಲುವುದಕ್ಕಾಗುತ್ತದೆ ಎಂದು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ): ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರು ಹಾಗೂ ಮಾನ್ಯ ಭೈರೇಗೌಡರು ಈ ಬಗ್ಗೆ ವಿವರವಾಗಿ ಪ್ರಸ್ತಾಪ ಮಾಡಿದ್ದಾರೆ. ಈ ಶಾಸನಬದ್ಧ ನಿರ್ಣಯವನ್ನು ಏತಕ್ಕೋಸ್ಕರ ವಿರೋಧ ಮಾಡಬೇಕು ಎಂದು ಹೇಳಿದ್ದಾರೆ. ಕರ್ನಾಟಕ ವಿದ್ಯುತ್ ಮಂಡಲಿಯ ಕಾರ್ಯವೈಖರಿ, ಕಾರ್ಯನಿರ್ವಹಣೆ ಬಗ್ಗೆ ಕೇವಲ ವಿರೋಧಪಕ್ಷದ ಸದಸ್ಯರು ಮಾತ್ರವಲ್ಲ, ಆಡಳಿತ ಪಕ್ಷದ ಸದಸ್ಯರೂ ಕೂಡ ಇದರ ಬಗ್ಗೆ ಸಮಾಧಾನ ವ್ಯಕ್ತಮಾಡುವ ರೀತಿಯಲ್ಲಿ ಇಲ್ಲ ಎಂದು ನಾನು ಭಾವಿಸುತ್ತೇನೆ. ಅದನ್ನು ತಾವು ಒಪ್ಪುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಅದನ್ನು ಸರಿಮಾಡಬೇಕಾದರೆ ತಾವು ದೃಢವಾದ, ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ಗಳಲ್ಲೇ ಅತ್ಯಂತ ಅದಕ್ಷತೆಯಿಂದ ಕೂಡಿದ, ಭ್ರಷ್ಟಾಚಾರದಿಂದ ಕೂಡಿದ ಯಾವುದಾದರೂ ಒಂದು ಮಂಡಲಿಗೆ ಪ್ರಥಮ ಬಹುಮಾನ ಕೊಡಬೇಕೆಂದಿದ್ದರೆ ಆ ಬಹುಮಾನವನ್ನು ತಾವು ಈ ಮಂಡಳಿಗೆ ಕೊಡಬೇಕಾಗುತ್ತದೆ. ಪೋಲ್‌ಗೆ 500 ರೂಪಾಯಿ ಕೊಡಬೇಕೆಂದು ಅವರು ಹೇಳುತ್ತಿದ್ದರು. ಅದನ್ನು ನಾನು ಹೇಳುವುದಿಲ್ಲ. ಕೆ.ಇ.ಬಿ.ಗೆ ಯಾರಾದರೂ ಸಹ ಲಂಚ ಕೊಡದೇ ಅವರ ವಿದ್ಯುತ್‌ನ್ನು ಪೂರೈಕೆ ಮಾಡಿಕೊಂಡಿದ್ದಾರೆಂದು ನಿದರ್ಶನವನ್ನು ತಾವು ಏನಾದರೂ ಕೊಟ್ಟರೆ ಅವರಿಗೆ ಪ್ರಶಸ್ತಿಯನ್ನು ಕೊಡಬೇಕಾಗುತ್ತದೆ. ಅಲ್ಲಿ ಅತ್ಯಂತ ಪ್ರಾಮಾಣಿಕ ಅಧಿಕಾರಿಗಳನ್ನು ನಾವು ವಿರಳವಾಗಿ ಕಾಣಬೇಕಾಗಿದೆ. ಇಲ್ಲಿರುವಂತಹ ಅವ್ಯವಹಾರ ಏನು ಇದೆ, ಇದು ಎರಡು ರೀತಿಯಾಗಿದೆ. ಮಾನ್ಯ ಸಿಂಧ್ಯರವರು ಹೇಳಿದ ಹಾಗೆ 20ರಷ್ಟು ಟ್ರಾನ್ಸ್‌ಮಿಷನ್ ಲಾಸ್ ಆಗಿದೆ. ಇದನ್ನು ಹೋದ ವರ್ಷಕ್ಕೂ ಈ ವರ್ಷಕ್ಕೂ ಹೋಲಿಸಿ ನೋಡಿದರೆ ಈಗ ಇದು ಕಡಿಮೆಯಾಗಿದೆ ಎಂದು ಹೇಳಬಹುದು. ಆದರೆ ಈ ಸೋರುವಿಕೆಯಿಂದ ಹೋಗುತ್ತಿರುವಂತಹ ವಿದ್ಯುತ್ ಪ್ರಮಾಣ ಏನು ಇದೆ ಅದು ಕಡಿಮೆಯಾಗುವುದಿಲ್ಲ. ಶೇಕಡಾವಾರು ಟ್ರಾನ್ಸ್‌ಮಿಷನ್ ಲಾಸ್ ಕಡಿಮೆಯಾಗಿದೆ ಎಂದು ಹೇಳಿದರೂ ಸಹ ಟೋಟಲ್ ಟ್ರಾನ್ಸ್ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಲಾಸ್ ಏನೂ ಕಡಿಮೆಯಾಗಿಲ್ಲ. ಹೋದ ವರ್ಷ 2220 ಮಿಲಿಯನ್ ಕಿಲೋ ವ್ಯಾಟ್ಸ್ ಇದ್ದರೆ ಈ ವರ್ಷ 2472 ಮಿಲಿಯನ್ ಕಿಲೋ ವ್ಯಾಟ್ಸ್ ಸೋರಿಹೋಗಿದೆ. ಇದು

ಕೇವಲ ಟ್ರಾನ್ಸ್‌ಮಿಷನ್ ಲಾಸೇ ಅಥವಾ ಬೇರೆ ಕಾರಣವೇನಾದರೂ ಇದಕ್ಕೆ ಇದೆಯೇ ಎಂದು ಪ್ರಶ್ನೆ ಮಾಡುವುದಾದರೆ, ಬೇರೆ ಕಾರಣಗಳೂ ಕೂಡ ಇದೆ ಎಂದು ತಾವು ಒಪ್ಪಿಕೊಳ್ಳುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಇವತ್ತಿನ ದಿವಸ ಯಾರು ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿದ್ದಾರೆ ಅವರು ಯಾರೂ ಸಹ ಅವರು ಉಪಯೋಗಿಸಿಕೊಂಡಂತಹ ವಿದ್ಯುತ್ತಿಗೆ ಪೂರ್ಣವಾದ ತೆರಿಗೆಯನ್ನು ಕೊಡುತ್ತಿಲ್ಲ. ಏತಕ್ಕೋಸ್ಕರ ಈ ವ್ಯವಸ್ಥೆ ಮುಂದುವರಿಯುತ್ತಿದೆ ಎಂದರೆ ಇದರಲ್ಲಿ ಯಾರು ಹೊರತು ಎಂದು ಹುಡುಕಬೇಕಾಗಿದೆ. ನಿಮ್ಮಲ್ಲಿ ದೃಢ ನಿರ್ಧಾರವಿದ್ದರೆ ಒಂದು ಕೆಲಸ ಮಾಡಿ ಬೆಂಗಳೂರಿನಲ್ಲಿ ಯಾರು ಮುಖ್ಯವಾಗಿ ಅಸಿಸ್ಟೆಂಟ್ ಇಂಜಿನಿಯರ್ಸ್, ಎಕ್ಸಿಕ್ಯುಟೀವ್ ಇಂಜಿನಿಯರ್ಸ್ ಇದ್ದಾರೆ ಎಲ್ಲೆಲ್ಲಿ ಹೆಚ್ಚು ಹೆಚ್ಚು ಕೈಗಾರಿಕಾ ಪ್ರದೇಶಗಳು ಇದೆ, ಬೆಳಗಾಂ ಇರಬಹುದು, ಹುಬ್ಬಳ್ಳಿ, ಧಾರವಾಡ, ಬೆಂಗಳೂರು ಇರಬಹುದು, ಇಂತಹ ಕಡೆಗಳಲ್ಲಿ ಪ್ರಮುಖವಾದ ಸ್ಥಾನಗಳಲ್ಲಿರುವಂತಹ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ಸ್, ಎಕ್ಸಿಕ್ಯುಟೀವ್ ಇಂಜಿನಿಯರ್ಸ್ ಯಾರುಯಾರು ವಿದ್ಯುತ್ ಪೂರೈಕೆ ಬಗ್ಗೆ ನಿಗಾ ವಹಿಸಿ ಸರಿಯಾದಂತಹ ಬಿಲ್‌ನ್ನು ಮಾಡಬೇಕು, ಇಂತಹವರನ್ನು ಬದಲಾವಣೆ ಮಾಡುವುದಕ್ಕೆ ತಾವು ಪ್ರಯತ್ನ ಮಾಡಿನೋಡಿ. ಅದರಲ್ಲಿ ನೀವೇನಾದರೂ ಜಯಪ್ರದವಾದರೆ ಅಲ್ಲಿ ಲಂಚವಿಲ್ಲವೆಂದು ಹೇಳಬಹುದು. ಬದಲಾವಣೆ ಮಾಡಲಿಕ್ಕೆ ಹೋದರೆ ಅಲ್ಲಿ ಒಂದು ದೊಡ್ಡ ಹೋರಾಟ ಅಂದರೆ ಎಲ್ಲೂ ಕಾಣದಂತಹ ಹೋರಾಟ ನಡೆಯುತ್ತದೆ. ಎಲ್ಲೆಲ್ಲಿ ಹೆಚ್ಚು ಹೆಚ್ಚು ಹಣ ಮಾಡಲಿಕ್ಕೆ ಅವಕಾಶ ಇದೆ ಅಂತಹ ಜಾಗಕ್ಕೆ ಬರಲಿಕ್ಕೆ ದೊಡ್ಡ ಹೋರಾಟ ನಡೆಯುತ್ತದೆ. ಅಲ್ಲಿ ಭ್ರಷ್ಟಾಚಾರ ಜಾಸ್ತಿ ಇದೆ ಎಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಇದನ್ನು ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಬೇಕು. ಮತ್ತೊಂದು ಕಡೆ ಅನಾವಶ್ಯಕರಾಗಿ ಆಡಳಿತ ಕಾರ್ಯನಿರ್ವಹಣೆ ವೆಚ್ಚ ಜಾಸ್ತಿಯಾಗುತ್ತಿದೆ. ಕೆ.ಇ.ಬಿ.ಗೆ ಬೇಕಾದಂತಹ ಉಪಕರಣಗಳನ್ನು ಬಿಡಿ ಭಾಗಗಳನ್ನು ಕೊಂಡುಕೊಳ್ಳುವಲ್ಲಿ ಆಗುತ್ತಿರುವಂತಹ ಭ್ರಷ್ಟಾಚಾರ ಇನ್ನೆಲ್ಲೂ ಯಾವ ಇಲಾಖೆಯಲ್ಲೂ ಆಗಲಿಕ್ಕೆ ಸಾಧ್ಯವಿಲ್ಲ. ಮೊದಲು ಹೇಳುತ್ತಿದ್ದವು. ಅತ್ಯಂತ ಭ್ರಷ್ಟವಾದ ಇಲಾಖೆ ಲೋಕೋಪಯೋಗಿ ಇಲಾಖೆ ಎಂದು. ಆದರೆ ಈಗ ಅದಕ್ಕೆ ಪ್ರೈಜ್ ಕೊಡಬೇಕಾಗಿಲ್ಲ. ಕೊಡುವುದಾದರೆ ಇವರಿಗೇ ಕೊಡಿ. ಅತ್ಯಂತ ಭ್ರಷ್ಟವಾದ ಇಲಾಖೆ ಎಂದರೆ ಇದೇ ಆಗಿದೆ. ಇದನ್ನು ಬಿಟ್ಟು ಬೇರೆ ಇರಲಿಕ್ಕೆ ಸಾಧ್ಯವಿಲ್ಲ. ಪೋಲುಗಳನ್ನು ಕಂಬಗಳನ್ನು ತಯಾರು ಮಾಡಿ ಸಪ್ಲೈ ಮಾಡಬೇಕೆಂದು ಇದ್ದರೆ ಎಲ್ಲಿಂದ ಮಾಡಬೇಕೆಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಬೆಂಗಳೂರಿನಿಂದ ಧಾರವಾಡದಿಂದ ಇವುಗಳನ್ನು ಮಾಡಬೇಕೆಂದು ಇದ್ದು ತುಮಕೂರಿಗೆ ಈ ಪೋಲ್‌ಗಳು ಬೇಕು ಎಂದು ಇದ್ದರೆ ಎಲ್ಲಿಂದ ತರುತ್ತೀರಿ, ಧಾರವಾಡದಿಂದ ತರಬೇಕಾಗುತ್ತದೆ. ಇವರ ಲೆಕ್ಕದ ಪುಸ್ತಕದಲ್ಲಿ ಧಾರವಾಡವೆಂದೇ ಇರುತ್ತದೆ. ಆದರೆ ಅಲ್ಲಿ ನಿಜವಾಗಿ ಸಪ್ಲೈ ಆಗಿರುವುದು ಬೆಂಗಳೂರಿನಿಂದಲೇ. ಟ್ರಾನ್ಸ್‌ಪೋರ್ಟೇಷನ್ ಚಾರ್ಜ್ ಏನು ಇದೆ, ಅದನ್ನು ಮಾತ್ರ ಧಾರವಾಡದಿಂದ ತಂದಿದ್ದೀರೆಂದು ಬರೆಯುತ್ತಾರೆ. ಇದನ್ನು ನಾನೇನು ಹುಟ್ಟಿಸಿಕೊಂಡು ಹೇಳುತ್ತಿಲ್ಲ. ಇನ್ನೊಂದು ಪುಸ್ತಕದಲ್ಲಿ ಇದೆ. ಇದನ್ನು ಮಾಡುವವರು ಯಾರು? They are permitted to bring it from Karwar. ಇನ್ನು ಈ ಇಲಾಖೆ ಬಗ್ಗೆ ಅಂದರೆ ಇವರ ಸಾಲ ಎಷ್ಟು ಇದೆ ಎಂದು ನಾನು ಹೇಳುತ್ತೇನೆ. ಟೋಟಲ್ ಲಯಬಿಲಿಟಿ ಈಗ 1813 ಕೋಟಿ ಇದೆ. 1813 ಕೋಟಿ ಇದ್ದರೆ ಸರ್ಕಾರದಿಂದ ಸಾಲ 817 ಕೋಟಿ. ಸರ್ಕಾರ ಗ್ಯಾರಂಟಿ ಇರತಕ್ಕದ್ದು 850 ಕೋಟಿ. ಇವತ್ತು ಔಟ್‌ಸ್ಟ್ಯಾಂಡಿಂಗ್ ಬ್ಯಾಲೆನ್ಸ್ ಕಂತುಗಳನ್ನು ಮತ್ತು ಬಡ್ಡಿಯನ್ನು ಕಟ್ಟದಿರುವುದು ಗ್ಯಾರಂಟಿ ಎಲ್ಲಾ ಸೇರಿ 295 ಕೋಟಿ ರೂಪಾಯಿಯಾಗುತ್ತದೆ. ಇಷ್ಟೆಲ್ಲಾ ನೋಡಿಯೂ ಸಹ ಮಾನ್ಯ ಮೊಯಿಲಿಯವರು ಈವೊಂದು ಶಾಸನಾತ್ಮಕಬದ್ಧವಾದ ನಿರ್ಣಯವನ್ನು ತಂದಿದ್ದಾರೆ. ಇದಕ್ಕೆ ನಾನು ಆಶ್ಚರ್ಯಪಡುತ್ತೇನೆ. ಇದು ಇನ್ನು ಎಷ್ಟು ಕೆಡಬಹುದು. ಇವತ್ತಿನ ದಿವಸ ನಾನು ಒಂದು ಮಾತು ಹೇಳುತ್ತೇನೆ. ನಮ್ಮ

ಊರಿನಲ್ಲಿರುವ ಒಬ್ಬ ಬಡವ ಐಪಿ ಸೆಟ್ನ ದರ ಕಟ್ಟದಿದ್ದರೆ ಅವನಿಗೆ ಪೂರೈಕೆ ನಿಲ್ಲಿಸುತ್ತಾರೆ. ಆದರೆ ದೊಡ್ಡ ದೊಡ್ಡವರು ಏನು ಮಾಡಿದ್ದಾರೆ ಸ್ವಾಮಿ? 1986ನೇ ಇಸವಿಯಲ್ಲಿ 198 ಕೋಟಿ ರೂಪಾಯಿ ಬಾಕಿ ಇದ್ದರೆ 1987ನೇ ಇಸವಿಯಲ್ಲಿ 264 ಕೋಟಿ ರೂಪಾಯಿ ಬಾಕಿಯಿದೆ. 31-3-88ಕ್ಕೆ 356 ಕೋಟಿ ರೂಪಾಯಿ ಬಾಕಿಯಿದೆ. 1989ನೇ ಇಸವಿಯಲ್ಲಿ ಎಷ್ಟು ಕೋಟಿ ಬಾಕಿ ಇದೆಯೋ ಅದು ತಮಗೆ ಗೊತ್ತು. ಅಂದರೆ ಒಂದೇ ಸಮನೆ ಹೆಚ್ಚು ಬಾಕಿ ಇರುವುದಕ್ಕೆ ಕಾರಣವೇನು? ಏತಕ್ಕೋಸ್ಕರ ಬಾಕಿ ಬರುತ್ತಿಲ್ಲ? 1100 ಕೋಟಿ ರೂಪಾಯಿಗಳನ್ನು ಮುಂಗಡವಾಗಿ ಅವರು ಹಣ ಕೊಟ್ಟಿದ್ದಾರೆ. ಕೆ.ಇ.ಬಿ.ಯಿಂದ ಕೊಟ್ಟಿದ್ದಾರೆ. ಅದು ಇವತ್ತಿನವರೆಗೂ ವಸೂಲಿಯಾಗಿಲ್ಲ ಅಥವಾ ಅಡ್ಜಸ್ಟ್ ಆಗದೇ 1968ನೇ ಇಸವಿಯಿಂದಲೂ ಇದೆ. ಇದು ಏತಕ್ಕೆ ಸ್ವಾಮಿ? ನೀವು ಕೆ.ಇ.ಬಿ. ಆಡಳಿತ ಹೇಗಿದೆ ಎಂಬುದನ್ನು ತಾವೇ ಅರ್ಥಮಾಡಿಕೊಳ್ಳಿ. ಈ ರೀತಿಯಾಗಿ ತಮಗೆ ಇಷ್ಟಬಂದ ರೀತಿಯಲ್ಲಿ ಸ್ವೇಚ್ಛೆಯಾಗಿ ಕಾರ್ಯ ನಿರ್ವಹಣೆ ಮಾಡುತ್ತಿದ್ದಾರೆ. ಅವರಮೇಲೆ ಹಿಡಿತ ಮಾಡುವುದಕ್ಕೆ ತಾವು ಏನಾದರೂ ಕ್ರಮವನ್ನು ತೆಗೆದುಕೊಳ್ಳಬೇಕು. ನಿಜ, ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೋಸ್ಕರ ಗರಿಷ್ಠ ಮಿತಿಯನ್ನು ಹೆಚ್ಚು ಮಾಡುವ ಅವಶ್ಯಕತೆಯಿದ್ದರೂ ಕೆ.ಇ.ಬಿ. ಕಾರ್ಯನಿರ್ವಹಣೆಯನ್ನು ಗಮನಿಸಿದರೆ ನಿಜವಾಗಿಯೂ ಸಹ ಅವರಿಗೆ ಆ ಅರ್ಹತೆ ಇಲ್ಲವೆಂದು ಹೇಳುತ್ತೇನೆ. ಆ ದೃಷ್ಟಿಯಿಂದ ನಾನು ತಮ್ಮಲ್ಲಿ ಹೇಳುವುದು ಏನೆಂದರೆ, ಕಾಲಾವಕಾಶ ಇಲ್ಲದಿರುವುದರಿಂದ ಹೆಚ್ಚು ಮಾತನಾಡಲಿಕ್ಕೆ ಇಷ್ಟಪಡುವುದಿಲ್ಲ. ತಾವು ಗರಿಷ್ಠಮಿತಿಯನ್ನು ಹೆಚ್ಚು ಮಾಡುವುದರ ಜೊತೆಗೆ ಹೊಣೆಗಾರಿಕೆಯನ್ನು ಕನಿಷ್ಠ ಮೂರು ತಿಂಗಳುಗಳಲ್ಲಿ ಪುನಃ ವಿಧಾನಸಭೆ ಸೇರಿದರೆ ಸೇರುವುದರೊಳಗೆ ಒಂದು ಶ್ವೇತಪತ್ರವನ್ನು ಹೊರಡಿಸಿ, ಸದನದ ಸಮಿತಿಯನ್ನು ಮಾಡಿ, ಅದರಿಂದ ನಿಮಗೆ ಸಹಾಯವಾಗುತ್ತದೆ. ನಾನು ಯಾವುದೇ ವ್ಯಕ್ತಿಯನ್ನು ದೂರುತ್ತಿಲ್ಲ. ಯಾವುದೇ ಸರ್ಕಾರವನ್ನೂ ದೂರುತ್ತಿಲ್ಲ. ಯಾವುದೇ ಸರ್ಕಾರವಿದ್ದರೂ ಸಹ ಕೆ.ಇ.ಬಿ.ಯ ಕಾರ್ಯನಿರ್ವಹಣೆ ಬದಲಾಗಿಲ್ಲ. ಕೆ.ಇ.ಬಿ. ತದ್ವಿರುದ್ಧವಾಗಿಯೇ ನಡೆಯುತ್ತಿದೆ. ಅದರ ಬಗ್ಗೆ ತಾವು ಆಲೋಚನೆ ಮಾಡಬೇಕು. ಸದನದ ಸಮಿತಿಯನ್ನಾಗಲೀ, ಅಥವಾ ಶ್ವೇತಪತ್ರವನ್ನಾಗಲೀ ಹೊರಡಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಮುಖ್ಯವಾಗಿ ಸದನಸಮಿತಿಯನ್ನು ಮಾಡಿ ಸದನದ ಆ ಕಡೆಯ ಸದಸ್ಯರು ಈ ಕಡೆಯ ಸದಸ್ಯರು ಅವರನ್ನು ವಿಶ್ವಾಸಕ್ಕೆ ತೆಗೆದುಕೊಕಂಡು ಕಾರ್ಯನಿರ್ವಹಣೆ ಮಾಡಲಿಕ್ಕೆ ಪರಿಶೀಲನೆ ಮಾಡಿ ಒಂದು ವರದಿಯನ್ನು ಕೊಡಲಿಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇಷ್ಟು ಮಾತನಾಡಲಿಕ್ಕೆ ಅವಕಾಶಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷಿಣಿಯವರೆ, ಶಾಸನಾತ್ಮಕವಾದ ನಿರ್ಣಯದ ಬಗ್ಗೆ ಸಾಕಷ್ಟು ಮತ್ತು ಕೆ.ಇ.ಬಿ.ಯ ಬಗ್ಗೆ ಅದರ ಕೆಲಸಕಾರ್ಯಗಳ ಬಗ್ಗೆ ಮಾನ್ಯ ಸಿಂಧ್ಯಾರವರು, ಜಾಲಪ್ಪನವರು, ಭೈರೇಗೌಡರು ಮತ್ತು ಏಕಾಂತಯ್ಯನವರು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಈಗ ಪ್ರಮುಖವಾಗಿ ಇದು ಬಹಳ ವಿಸ್ತಾರವಾದ ಒಂದು ಮಂಡಳಿಯಾಗಿ ಬೆಳೆದಿದೆ. ಈಗಾಗಲೇ ಸುಮಾರು 500 ಕೋಟಿ ಬಾರೋಯಿಂಗ್ ಪವರ್ ಸ್ಯಾಚುರೇಷನ್ ಪಾಯಿಂಟ್‌ಗೆ ಬಂದಿದೆ. ಅದಕ್ಕಾಗಿ ಈವೊಂದು ನಿರ್ಣಯವನ್ನು ತರಬೇಕಾದ ಅವಶ್ಯಕತೆ ಬಂತು. ನಾನು ಒಪ್ಪುತ್ತೇನೆ. ಕೆ.ಇ.ಬಿ. ಮಂಡಳಿಯ ಬಗ್ಗೆ ತಾವೇನು ಮಾತನಾಡಿದ್ದೀರಿ, ಅದರ ಬಗ್ಗೆ ಸಾಕಷ್ಟು ಚುರುಕು ಮುಟ್ಟಿಸಬೇಕು. ಅದರ ಬಗ್ಗೆ ಸಾಕಷ್ಟು ದಕ್ಷತೆಯನ್ನು ಕೂಡ ಹೆಚ್ಚು ಮಾಡಬೇಕಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ. ಅದಕ್ಕೆ ಕೆಲವು ಸಲಹೆಗಳನ್ನು ಸಹ ಕೊಟ್ಟಿದ್ದೀರಿ. ಬರುವ ಅಧಿವೇಶನದಲ್ಲಿ ಇಲಾಖೆಯ ಬಗ್ಗೆ ಬೇಡಿಕೆ ಮೇಲಿನ ಚರ್ಚೆ ಬಂದಾಗ ಸಾಕಷ್ಟು ಹೆಚ್ಚಿಗೆ ಚರ್ಚೆ

ಮಾಡುವುದಕ್ಕೆ ಬರುತ್ತದೆ. ತಾವು ಶ್ವೇತಪತ್ರವನ್ನು ಹೊರಡಿಸಬೇಕೆಂದು ಕೇಳಿದ್ದೀರಿ. ಶ್ವೇತಪತ್ರವೆಂದು ಹೆಸರು ಇಡದಿದ್ದರೂ ಕೂಡ ತಮಗೆ ಗೊತ್ತಿದೆ. ಇಲಾಖೆಗೆ ಸಂಬಂಧಪಟ್ಟಹಾಗೆ ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ ಬರುತ್ತದೆ. ಮಾಮೂಲಾಗಿ ಅಡ್ಮಿನಿಸ್ಟ್ರೇಟಿವ್ ರಿಪೋರ್ಟ್ ಕೊಟ್ಟಿದೆ.

ತಾವು ಏನು ಕೆಲವು ಸೂಚನೆಗಳನ್ನು, ಸಲಹೆಗಳನ್ನು ಕೊಟ್ಟಿದ್ದೀರಿ, ಅದರ ಬಗ್ಗೆ ವಿವರಣಾತ್ಮಕವಾದ ಒಂದು ಪಟ್ಟಿಯನ್ನು ಅಥವಾ ವಿವರಣಾತ್ಮಕವಾದಂಥ ಮಂಡಳಿಯ ಕಾರ್ಯ ಚಟುವಟಿಕೆಗಳ ಬಗ್ಗೆ ಒಂದು ಹೆಚ್ಚಿನ ವರದಿಯನ್ನು ನಾವು ಕೊಡತಕ್ಕ ವ್ಯವಸ್ಥೆ ಮಾಡಿದಾಗ ಮುಂದೆ ಅಧಿವೇಶನದಲ್ಲಿ ನಡೆಯತಕ್ಕಂಥ ಚರ್ಚೆಗೆ ಹೆಚ್ಚು ಪ್ರಯೋಜನ ಆಗುತ್ತದೆ ಎಂದು ನಾನು ಭಾವಿಸುತ್ತೇನೆ. ಮತ್ತು ನಮ್ಮ ಸನ್ಮಾನ್ಯ ಬೈರೇಗೌಡರಂತೂ ಕೆ.ಇ.ಬಿ. ಬಗ್ಗೆ ಎಕ್ಸ್‌ಪರ್ಟ್ ಆಗಿಬಿಟ್ಟಿದ್ದಾರೆ. ಈಗ ಅವರು ಕೂಡ ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಈ ಸಲಹೆಗಳ ಪ್ರಕಾರ ನಾವು ನಮ್ಮ ಕೆ.ಇ.ಬಿ.ಯ ಚಟುವಟಿಕೆಗಳನ್ನು ತ್ವರಿತಗೊಳಿಸಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಅಲ್ಲಿ ಸರಿಯಾದಂಥ ಸಮರ್ಪಕವಾದಂಥ ಕೆಲಸಕಾರ್ಯಗಳು ಆಗುವುದಿಲ್ಲ. ಅದನ್ನು ಸರಿಪಡಿಸತಕ್ಕಂಥ ಕೆಲಸದ ಬಗ್ಗೆ ನಾವು ಪ್ರಾಮಾಣಿಕವಾದಂಥ ಪ್ರಯತ್ನ ಮಾಡುತ್ತೇವೆ ಎಂದು ಹೇಳಿ, ಏನು ಸಮಿತಿಯ ವಿಚಾರ ಹೇಳಿದ್ದೀರಿ. ಬೇಡಿಕೆಯ ಬಗ್ಗೆ ಚರ್ಚೆ ಮುಂದಿನ ಅಧಿವೇಶನದಲ್ಲಿ ಬರುತ್ತದೆ. ಅದು ಬಂದಾಗ ಸಮಿತಿಯ ಅವಶ್ಯಕತೆ ಬಿದ್ದರೆ ಆ ಸಮಿತಿಯನ್ನೂ ಕೂಡ ಮಾಡೋಣ. ಮತ್ತೆ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಈ ಬಗ್ಗೆ ತಮ್ಮನ್ನೆಲ್ಲಾ ಕರೆಯಿಸಿ ಮಾತನಾಡಲು ಅಧಿವೇಶನದ ಮೊದಲೇ ಸಾಧ್ಯವಾಗುವುದಿಲ್ಲ. ಆಮೇಲೆ ಖಂಡಿತವಾಗಿ ತಮ್ಮ ಜೊತೆಯಲ್ಲಿ ....

ಶ್ರೀ ಪಿ.ಜಿ.ಆರ್. ಸಿಂಧ್ಯ: ತಾವು ಇದು ಶಾಸನಾತ್ಮಕ ನಿರ್ಣಯ, ಪಾಸ್ ಮಾಡಿಕೊಂಡು ಹೋಗಬೇಕು. ತಕ್ಷಣ ಸಾಲ ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ನಮ್ಮ ಸರ್ಕಾರದಲ್ಲಿ ಅವರಿಗೆ ಕೊಡಲಿಕ್ಕೆ ದುಡ್ಡು ಇಲ್ಲ, ಎಂಬುದು ಅರ್ಥವಾಗುತ್ತದೆ. ಮಾಡಿಕೊಳ್ಳಿ. ಆದರೆ ಶ್ವೇತಪತ್ರ ನಾವು ಡಿಮ್ಯಾಂಡ್ ಮಾಡಿದ್ದೇವೆ. ಅದನ್ನು ಕನ್ಸಿಡರ್ ಮಾಡುತ್ತೇವೆ ಎಂದು ಹೇಳಿದ್ದೀರಿ. ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಈಗ ಬರಗಾಲ ಇದೆ. ಪವರ್ ಡಿಸ್ಟ್ರಿಬ್ಯೂಶನ್‌ಗೆ ಬಹಳ ಕಷ್ಟ ಇದೆ. ಕೊನೆಯಪಕ್ಷ ಇನ್ನು ಮೂರು-ನಾಲ್ಕು ತಿಂಗಳಲ್ಲಿ ಮಳೆಗಾಲ ಪ್ರಾರಂಭವಾಗುವವರೆಗೆ ಈ ದೊಡ್ಡದೊಡ್ಡ ಮದುವೆಗಳು, ಭವ್ಯ ಸಮಾರಂಭಗಳಿಗೆ ಕರೆಂಟ್ ಕೊಟ್ಟು ವೇಸ್ಟ್ ಮಾಡುತ್ತಿದ್ದಾರಲ್ಲ, ಅದನ್ನು ಬ್ಯಾನ್ ಮಾಡುವುದಕ್ಕೆ ನಿಮ್ಮ ಸರ್ಕಾರದಿಂದ ಸಾಧ್ಯವೇ ಎಂಬುದನ್ನು ವಿಚಾರಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ: ತಾವು ಒಂದು ಮಾತು ಹೇಳಿದ್ದು ಸರಿ. ಬೇರೆ ಬೇರೆ ರೀತಿಯಲ್ಲಿ ವಿದ್ಯುತ್ ಅಪವ್ಯಯ ಆಗುತ್ತಿದೆ, ಎಂಬುದನ್ನು ನಾವು ಅನೇಕ ಬಾರಿ ನೋಡುತ್ತಿದ್ದೇವೆ. ಇದು ಸರಿಯಲ್ಲ. ವಿದ್ಯುತ್ ಅಪವ್ಯಯವನ್ನು ನಿಲ್ಲಿಸಲಿಕ್ಕೆ ಪ್ರಯತ್ನ ಕೂಡ ನಾವು ಮಾಡಬೇಕಾಗುತ್ತದೆ. ಅದನ್ನು ನಾವು ಆಲೋಚನೆ ಮಾಡಬೇಕಾಗುತ್ತದೆ. ಏಕೆಂದರೆ ಕೆಲವು ಸಾರಿ ಎಲ್ಲಿ ಆದ್ಯತೆ ಕೊಡಬೇಕೋ, ಅಲ್ಲಿ ಆದ್ಯತೆ ಕೊಡುವುದಿಲ್ಲ. ಇದಕ್ಕೆ ನಾವು ಅಧಿವೇಶನಕ್ಕೆ ಕಾಯಬೇಕಾಗಿಲ್ಲ. ಇದನ್ನು ಚುರುಕುಗೊಳಿಸುವುದಕ್ಕೆ ಮತ್ತು ಇದನ್ನು ಸರಿಪಡಿಸತಕ್ಕಂಥ ರೀತಿಯಲ್ಲಿ ಮತ್ತು ಅಪವ್ಯಯವನ್ನು ಆದಷ್ಟುಮಟ್ಟಿಗೆ ನಿಲ್ಲಿಸುವ ಮಟ್ಟಿಗೆ ನಾವು ಕಾರ್ಯಕ್ರಮ ಮಾಡುತ್ತೇವೆ. ಮಾನ್ಯ ಯಡಿಯೂರಪ್ಪನವರ ಅಮೂಲ್ಯವಾದ ಸಲಹೆಗಳು ಕೂಡ ನಮಗೆ ಬೇಕಿತ್ತು. ಆದರೆ ನಾವು ಅದರಿಂದ ವಂಚಿತರಾಗಿದ್ದೇವೆ. ಆದರೆ ಮುಂದೆ ಅವರ ಸಲಹೆಗಳನ್ನು ನಾವು ಸ್ವೀಕಾರ ಮಾಡತಕ್ಕದ್ದು, ಗ್ರಹಿಸತಕ್ಕಂಥ ಅವಕಾಶ ಬರಲಿ ಎಂದು ಹಾರೈಸಿ, ಇದಕ್ಕೆ ಮನ್ನಣೆಯನ್ನು ಕೊಡಬೇಕೆಂದು ಸಭೆಯನ್ನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ,

"1948ನೇ ಇಸವಿಯ ವಿದ್ಯುಚ್ಛಕ್ತಿ (ಪೂರೈಕೆ) ಅಧಿನಿಯಮದ (1948ರ ಕೇಂದ್ರದ ಅಧಿನಿಯಮ 54) 65ನೇ ಕಲಮಿನ 1ನೇ ಉಪಕಲಮಿನ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಯಾವುದೇ ಸಮಯದಲ್ಲಿ ಪಡೆಯಬಹುದಾದ ಸಾಲದ ಮೊತ್ತವನ್ನು ರೂ.10 ಕೋಟಿಗೂ ಹೆಚ್ಚಿನ ಗರಿಷ್ಠ ಮಿತಿಗೆ ನಿಗದಿಪಡಿಸಲು ಸದರಿ ಕಲಮಿನ 3ನೇ ಉಪಕಲಮಿನ ಮೇರೆಗೆ ರಾಜ್ಯ ವಿಧಾನಸಭೆಯ ಅನುಮೋದನೆ ಬೇಕಾಗಿರುತ್ತದೆ.

ಹಾಗೂ ಈ ಕಾರಣದಿಂದ ದಿನಾಂಕ 27ನೇ ಆಗಸ್ಟ್ 1974ರಂದು ಕರ್ನಾಟಕ ವಿಧಾನಸಭೆಯು ಒಂದು ನಿರ್ಣಯವನ್ನು ಅಂಗೀಕರಿಸುವ ಮೂಲಕ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಯಾವುದೇ ಸಮಯದಲ್ಲಿ ಪಡೆಯಬಹುದಾದ ಸಾಲದ ಗರಿಷ್ಠ ಮೊತ್ತವನ್ನು ರೂ. 150 ಕೋಟಿ ಎಂದು ನಿಗದಿಪಡಿಸಿರುವ ಸರ್ಕಾರದ ಪ್ರಸ್ತಾಪನೆಗೆ ಅನುಮತಿ ನೀಡಿರುತ್ತದೆ.

ಹಾಗೂ ಈ ಕಾರಣದಿಂದ ಸದರಿ ಅಧಿನಿಯಮದ 65ನೇ ಕಲಮಿನ 1ನೇ ಉಪಕಲಮಿನ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಯಾವುದೇ ಸಮಯದಲ್ಲಿ ಪಡೆಯಬಹುದಾದ ಸಾಲದ ಗರಿಷ್ಠ ಮೊತ್ತ ರೂ.150 ಕೋಟಿ ಎಂದು 27ನೇ ಆಗಸ್ಟ್ 1974ರಿಂದ ಜಾರಿಗೆ ಬರುವಂತೆ ಸರ್ಕಾರ ನಿಗದಿಪಡಿಸಿರುವುದಕ್ಕೆ ಸಂಬಂಧಿಸಿದಂತೆ ಸದರಿ ಕಲಮಿನ 3ನೇ ಉಪಕಲಮನ್ನು ಅನುಸರಿಸಿ ಪಿ.ಡಬ್ಲ್ಯೂ.ಡಿ. ೮೪ ಇಇಬಿ 73ನೇ ಕ್ರಮಾಂಕದ ಆದೇಶವನ್ನು 10ನೇ ಸೆಪ್ಟೆಂಬರ್ 1974ರಂದು ಹೊರಡಿಸಲಾಗುತ್ತದೆ.

ಹಾಗೂ ಈ ಕಾರಣದಿಂದ ದಿನಾಂಕ ೮ನೇ ಜೂನ್ 1984ರಂದು ಕರ್ನಾಟಕ ವಿಧಾನಸಭೆಯು ಒಂದು ನಿರ್ಣಯವನ್ನು ಅಂಗೀಕರಿಸುವ ಮೂಲಕ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಯಾವುದೇ ಸಮಯದಲ್ಲಿ ಪಡೆಯಬಹುದಾದ ಸಾಲದ ಗರಿಷ್ಠ ಮೊತ್ತವನ್ನು ರೂ. 300 ಕೋಟಿ ಎಂದಿ ನಿಗದಿಪಡಿಸಿರುವ ಸರ್ಕಾರದ ಪ್ರಸ್ತಾವನೆಗೆ ಅನುಮತಿ ನೀಡಿರುತ್ತದೆ.

ಹಾಗೂ ಈ ಕಾರಣದಿಂದ ಸದರಿ ಅಧಿನಿಯಮದ 65ನೇ ಕಲಮಿನ 1ನೇ ಉಪಕಲಮಿನ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಯಾವುದೇ ಸಮಯದಲ್ಲಿ ಪಡೆಯಬಹುದಾದ ಸಾಲದ ಗರಿಷ್ಠ ಮೊತ್ತ ರೂ. 300 ಕೋಟಿ ಎಂದು ೮ನೇ ಜೂನ್ 1984ರಿಂದ ಜಾರಿಗೆ ಬರುವಂತೆ ಸರ್ಕಾರ ನಿಗದಿಪಡಿಸಿರುವುದಕ್ಕೆ ಸಂಬಂಧಿಸಿದಂತೆ ಸದರಿ ಕಲಮಿನ 3ನೇ ಉಪಕಲಮನ್ನು ಅನುಸರಿಸಿ ಪಿ.ಡಬ್ಲ್ಯು.ಡಿ. 159 ಇಇಬಿ ೮೪ ಕ್ರಮಾಂಕದ ಆದೇಶವನ್ನು 9ನೇ ಜೂನ್ 1984ರಂದು ಹೊರಡಿಸಲಾಗಿರುತ್ತದೆ.

ಹಾಗೂ ಈ ಕಾರಣದಿಂದ ಕರ್ನಾಟಕ ರಾಜ್ಯ ಸರ್ಕಾರ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಸದರಿ ಕಲಮಿನ 1ನೇ ಉಪಕಲಮಿನ ಮೇರೆಗೆ ಯಾವುದೇ ಸಮಯದಲ್ಲಿ ಪಡೆಯಬಹುದಾದ ಸಾಲದ ಗರಿಷ್ಠ ಮೊತ್ತವನ್ನು ರೂ. 600 ಕೋಟಿ ಎಂದು ನಿಗದಿಪಡಿಸಲುದ್ದೇಶಿಸಿರುತ್ತದೆ.

ಆದುದರಿಂದ, ಈಗ, ಸದರಿ ಅಧಿನಿಯಮದ 65ನೇ ಕಲಮಿನ 1ನೇ ಉಪಕಲಮಿನ ಮೇರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಯಾವುದೇ ಸಮಯದಲ್ಲಿ ಪಡೆಯಬಹುದಾದ ಸಾಲದ ಗರಿಷ್ಠ ಮೊತ್ತ ರೂ.600 ಕೋಟಿ ಎಂದು ನಿಗದಿಪಡಿಸುವ ರಾಜ್ಯ ಸರ್ಕಾರದ ಪ್ರಸ್ತಾಪಕ್ಕೆ ಸದರಿ ಕಲಮಿನ 3ನೇ ಉಪಕಲಮಿನ ಮೇರೆಗೆ ಕರ್ನಾಟಕ ವಿಧಾನಸಭೆಯು ಈ ಮೂಲಕ ಅನುಮೋದನೆ ನೀಡುವುದು.

ಪ್ರಸ್ತಾಪವು ಅಂಗೀಕರಿಸಲ್ಪಟ್ಟಿತು.

ಶಾಸನಾತ್ಮಕವಾಗಿ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು) (ಶ್ರೀ ಎಸ್. ಬಂಗಾರಪ್ಪ, ಮುಖ್ಯಮಂತ್ರಿ ಅವರ ಪರವಾಗಿ) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ರಾಜ್ಯದಲ್ಲಿ ಜಲಮಾಲಿನ್ಯ ತಡೆಗಟ್ಟುವಿಕೆ ಹಾಗೂ ನಿಯಂತ್ರಣ ಮತ್ತು ಶುದ್ಧ ಜಲವನ್ನು ಯಥಾ ಸ್ಥಿತಿಯಲ್ಲಿಡುವ ಹಾಗೂ ಉಳಿಸಿಕೊಂಡು ಬರುವುದಕ್ಕೆ ಸಂಬಂಧಿಸಿದ ಜಲ(ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) ಅಧಿನಿಯಮ, 1974 (ಕೇಂದ್ರ ಅಧಿನಿಯಮ 6, 1974) ಕರ್ನಾಟಕ ರಾಜ್ಯದಲ್ಲಿ 23ನೇ ಮಾರ್ಚ್ 1974ರಿಂದ ಜಾರಿಗೆ ಬಂದಿರುತ್ತದೆ.

ಹಾಗೂ ಈ ಕಾರಣದಿಂದ ಜಲ(ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 1974 (ಕೇಂದ್ರ ಅಧಿನಿಯಮ 44, 1978) ಇದನ್ನು ಸಹ ಕರ್ನಾಟಕ ರಾಜ್ಯ 13ನೇ ಫೆಬ್ರವರಿ 1982ರಲ್ಲಿ ಅಂಗೀಕರಿಸಿರುತ್ತದೆ.

ಹಾಗೂ ಮೇಲ್ಕಾಣಿಸಿದ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವಲ್ಲಿ ಕೆಲವು ಆಡಳಿತಾತ್ಮಕ ಹಾಗೂ ಕಾರ್ಯರೂಪದ ತೊಂದರೆಗಳ ಕಾರಣದಿಂದ ಸದರಿ ಅಧಿನಿಯಮಕ್ಕೆ ಕೆಲರು ತಿದ್ದುಪಡಿಗಳನ್ನು ಮಾಡುವ ಅಗತ್ಯತೆಯನ್ನು ಭಾರತ ಸರ್ಕಾರ ಪರಿಶೀಲಿಸುತ್ತದೆ.

ಹಾಗೂ ಈ ಕಾರಣದಿಂದ, ಅದರಂತೆ ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 1988 (ಕೇಂದ್ರ ಅಧಿನಿಯಮ 53, 1988) ವನ್ನು ಸಂಸತ್ತಿನಲ್ಲಿ ಅಂಗೀಕರಿಸಲಾಯಿತು. ಹಾಗೂ ಸಂವಿಧಾನದ 252(1) ಹಾಗೂ (2)ನೇ ಅನುಚ್ಛೇಧದ ಮೇರೆಗೆ ಒಂದು ನಿರ್ಣಯವನ್ನು ಅಂಗೀಕರಿಸುವ ಮೂಲಕ ಅಧಿನಿಯಮವನ್ನು ಅಂಗೀಕರಿಸಬೇಕೆಂದು ಭಾರತ ಸರ್ಕಾರ ರಾಜ್ಯ ಸರ್ಕಾರವನ್ನು ಕೋರಿರುತ್ತದೆ.

ಈಗ ಆದುದರಿಂದ, ಸಂವಿಧಾನದ 252ನೇ ಅನುಚ್ಛೇಧದ ಖಂಡಿಕೆ (2) ನ್ನು ಸೇರಿಸಿ ಓದಿಕೊಂಡಂತೆ ಸದರಿ ಅನುಚ್ಛೇಧದ ಖಂಡಿಕೆ (1) ನ್ನು ಅನುಸರಿಸಿ, ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 1988 (ಕೇಂದ್ರ ಅಧಿನಿಯಮ 53, 1988) ವನ್ನು ಕರ್ನಾಟಕ ರಾಜ್ಯ ಅಂಗೀಕರಿಸಬೇಕೆಂದು ಈ ವಿಧಾನ ಸಭೆಯು ಈ ಮೂಲಕ ನಿರ್ಣಯಿಸುತ್ತದೆ.

ಸನ್ಮಾನ್ಯ ಉಪಾಧ್ಯಕ್ಷಿಣಿಯರೇ, ಕೇಂದ್ರ ಸರ್ಕಾರ ಮತ್ತು ಲೋಕ ಸಭೆ 1988ರಲ್ಲಿಯೇ ನಿರ್ಣಯ ಮಾಡಿದೆ. ನಮ್ಮ ರಾಜ್ಯ ಸರ್ಕಾರ ಬಹಳ ತಡ ಮಾಡಿದೆ. ಈಗಾಗಲೇ ವಿಧಾನ ಸಭೆ ಒಪ್ಪಿಗೆ ಕೊಡಬೇಕಾಗಿತ್ತು. ವಿಧಾನ ಪರಿಷತ್ ಒಪ್ಪಿಗೆ ಕೊಟ್ಟ ನಂತರ ನಾವು ಭಾರತ ಸರ್ಕಾರಕ್ಕೆ ಕಳುಹಿಸುತ್ತೇವೆ.. ಜಲಮಾಲಿನ್ಯದ ವಿಚಾರದಲ್ಲಿ ಕಾನೂನುಗಳು ಇವೆ. It is sometimes a law without teeth. ಇದರಿಂದ ಸ್ವಲ್ಪ ಬಲ ಬರುತ್ತದೆ. ಮತ್ತು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕಾಗುತ್ತದೆ. ತಮಗೂ ಗೊತ್ತಿದೆ. ತುಂಗಭದ್ರಾ ನದಿ ಹರಿಹರ ಫಾಲಿ ಫೈಬರ್‌ನಿಂದ ಏನು ಪೊಲ್ಯೂಟ್ ಆಗುತ್ತಿದೆ. ಇನ್ನೂ ಅನೇಕ ಕಡೆ ಯಾವ ರೀತಿ ಆಗುತ್ತಿದೆ, ಅದನ್ನು ನಿಲ್ಲಿಸುವುದಕ್ಕೆ ಹೆಚ್ಚು ಶಕ್ತಿಯನ್ನು ಈ ಶಾಸನಕ್ಕೆ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಸನ್ಮಾನ್ಯ ವಾಟಾಳ್ ನಾಗರಾಜ್ ರವರಿಗೂ ಗೊತ್ತಿದೆ. ಇದನ್ನು ಹಿಡಿದು ನಿಲ್ಲಿಸಬೇಕು, ಇದು ನಿಮಗೆ ಡೈರೆಕ್ಟಾಗಿ ಸಂಬಂಧಪಟ್ಟಿದ್ದುದು. ಅಲ್ಲಿ ಏನಾದರೂ ಹೊಡೆಯುವುದಕ್ಕೆ ಹೋದರೆ ಕಾನೂನಿನ ತಡೆಯಿಂದ ಹೈಕೋರ್ಟ್ ನಮಗೆ ತಡೆ ಮಾಡುತ್ತದೆ. ಭಾರತ ಸರ್ಕಾರ

ಈ ಕಾನೂನು ಕೊಡುವುದರಿಂದ ರಾಜ್ಯ ಸರ್ಕಾರಕ್ಕೆ ಹೆಚ್ಚು ಶಕ್ತಿ ಬರುತ್ತದೆ. ಮತ್ತು ಇದು ಬಹಳ ಉಪಯುಕ್ತವಾಗುತ್ತದೆ. ನಾವು ಇಷ್ಟರವರೆಗೆ ಮಾಡಬೇಕಾಗಿತ್ತು. ಈಗ ನಾವು ಮಾಡಿರುವುದರಿಂದ ತಮ್ಮ ಸಮಸ್ಯೆಗಳಿಗೆ, ಇದರಿಂದ ಪರಿಹಾರ ಸಿಗುತ್ತದೆ. ಆದುದರಿಂದ, ಇದಕ್ಕೆ ಮಂಜೂರಾತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಿಣಿಯವರೇ ಸರ್ಕಾರದವರು ಈ ಒಂದು ನಿರ್ಣಯವನ್ನು ಸಭೆಯ ಮುಂದೆ ಏನು ಮಂಡಿಸಿದ್ದಾರೆ, ಇದನ್ನು ಕೇಂದ್ರ ಸರ್ಕಾರದವರು 1988ರಲ್ಲಿ ಪಾರ್ಲಿಮೆಂಟ್‌ನಲ್ಲಿ ಮಾಡಿದ್ದಾರೆ ಈಗ ರಾಜ್ಯ ಸರ್ಕಾರದವರು ಸಹಿತ ಇದರ ಒಪ್ಪಿಗೆಯನ್ನು ಪಡೆದು ಕಾರ್ಯಗತ ಮಾಡಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ, ಜಲ ಮಾಲಿನ್ಯ ಮತ್ತು ಅದರ ನಿಯಂತ್ರಣ ಪರಿಸರ ಮಾಲಿನ್ಯ ಮತ್ತು ಅದರ ನಿಯಂತ್ರಣ ಇವೆಲ್ಲಾ ಒಂದಕ್ಕೊಂದು ಸಂಬಂಧಪಟ್ಟ ವಿಚಾರಗಳು ಒಂದು ಕಡೆ. ಈ ಕಾನೂನು ಪಾಸ್ ಮಾಡುವುದು ಮತ್ತೊಂದು ಕಡೆ. ಗ್ರಾನೈಟ್ ಅವ್ಯಾಹತವಾಗಿ ಹೋಗುತ್ತಿದೆ. ಇದರಲ್ಲಿ ಏನು ಅರ್ಥವಿದೆ ಎನ್ನುವುದು ನನಗೂ ಸಹಿತ ಅರ್ಥವಾಗುವುದಿಲ್ಲ, ನಿಮ್ಮಲ್ಲಿ ನಾನು ವಿನಂತಿಮಾಡಿಕೊಳ್ಳುವುದೇನೆಂದರೆ ಕೇಂದ್ರ ಸರ್ಕಾರದವರು ಏನು ಹೇಳಿದ್ದಾರೆ ಎನ್ನುವ ಡೀಟೆಲ್ಸ್ ನಮಗೆ ಸಿಕ್ಕಿಲ್ಲ. ನಿನ್ನೆ ದಿನ ಇದು ನಮ್ಮ ಕೈಗೆ ಬಂತು, ನಾವು ಓದಿಕೊಳ್ಳುವುದಕ್ಕೆ ಆಗಿಲ್ಲ. ಈಗ ಕೆ.ಇ.ಬಿ.ಗೆ ಏನೋ ಸಾಲ ಬೇಕಾಗಿತ್ತು ತಾವು ಪಾಸ್ ಮಾಡಿಸಿಕೊಂಡಿದ್ದೀರಿ. ಟೈಮ್ ಕೊಡಿ ನೆಕಸ್ಟ್ ಸೆಷನ್‌ನೊಳಗೆ ನಾವು ಓದಿಕೊಂಡು ಅದೇನು ಚರ್ಚೆ ಮಾಡಬೇಕೋ ಅವಶ್ಯಕತೆ ಇದ್ದರೆ ಮಾಡೋಣ ಅದಕ್ಕೇನಂತೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಆಗಬಹುದು.

ಉಪಾಧ್ಯಕ್ಷಿಣಿಯವರು : ಈ ವಿಷಯವನ್ನು ಮುಂದಕ್ಕೆ ಹಾಕಬಹುದು. ಈಗ ಪ್ರಕಟಣೆ.

Madam Deputy Speaker:

List of Members of various Legislature Committee, State Library Authority and Senate of Bangalore University whose names were announced in the House on 27th March 1991.

1.* COMMITTEE ON PUBLIC ACCOUNTS

Sriyuths:

1.* Anjana Murthy

2.* A.B Jkanur

3. Hanume Gowda

4. K.B. Koliwad

5. S.B Patil

6. Srirangadevarayalu

7. Vatal Nagaraj

8. Vijayakumar Shetty

9. H.Ekanthaiah

10. R.V. Deshpande